Sri M. C. NARASIMHAN.—I want to know whether the Ministers are not intervening. Is it the position of the Government that the Ministers do not want to intervene in the debate, that they have no reply to the remarks offered so far.

Sri B. D. JATTI.—That is a matter left to the Ministers. We will see what we can do. We are not bound down by the suggestion of the Honourable Member.

Sri M. C. NARASIMHAN.—I only want information as to whether they are going to intervene, if they are not going to intervene, the only question is as to whether in accordance with your ruling, Sri Puttaramiya has to reply and all the other consequences will follow. I think this is sufficient ground....

Sri B. D. JATTI.—We will have to watch the proceedings, what type of speeches are going to come, we do not know. We will see at that time. He cannot bind us down like this by making a threat.

Mr. SPEAKER.—Now, we will go to the subject-matter of the motion.

Sri B. D. JATTI.—If you can fix up the time and date of voting....

Mr. SPEAKER.—Does the Government require three to four hours ?

Sri B. D. JATTI.—Yes.

Mr. SPEAKER.—It means the whole day. Now, I have received notice from Members that they would like to speak on the motion; there are six of them from the Opposition. I think they have had a sufficient opportunity and if they want to take part in the debate, I cannot give much more time. I will have to curtail some more time.

Sri B. K. PUTTARAMIYA.—It may be extended by one more day. This is a very important motion. I am surprised at the Speaker saying that we are wasting Money on this motion. This is a very important motion and this is the first of its kind in the history of this Assembly. I do not think in your regime as Deputy Speaker in the former Bombay Assembly you had ever a chance of hearing such a debate.

MOTION OF NO CONFIDENCE IN THE COUNCIL OF MINISTERS

(*Debate* Contd.)

†ಶ್ರೀ ಎಂ. ಎಸ್. ಪಟ್ಟಣ (ರಾಮದುರ್ಗ) ಸಭಾಮಾನ್ಯರೆ, ಈಗ ವಿರೋಧ ಪಕ್ಷದವರಾದ ನಾವು ತಂದಿರುವ, ಸದ್ಯದ ಮಂತ್ರಿಮಂಡಳದ ಮೇಲಿನ ಅವಿಶ್ವಾಸ ಠರಾವಿಗೆ ನನ್ನ ಬೆಂಬಲಕೊಡುತ್ತಾ ನಾಲ್ಕಾರು ಮಾತುಗಳನ್ನು ಹೇಳುತ್ತಿದ್ದೇನೆ.

ಈ ಮಂತ್ರಿಮಂಡಳ ಬಂದಾಗಿನಿಂದ ಒಂದು ಪಕ್ಷಪಾತ ಧೋರಣೆಯಿಂದ ನಡೆಯುತ್ತಾ ಇದೆ. ಇಷ್ಟೇ ಅಲ್ಲ. ವಿರೋಧ ಪಕ್ಷದವರನ್ನು ಒಂದೇ ಪ್ರಕಾರ ಪೋಲೀಸು ದಳದ ಸಹಾಯದಿಂದ ಮತ್ತು ರಾಜ್ಯದ ಅಧಿಕಾರಿಗಳ ಒಳಸಂಚಿನಿಂದ ಹತ್ತಿಕ್ಕಿಬಿಡುವುದರಲ್ಲಿ ಮಗ್ನರಾಗಿ

(ಶ್ರೀ ಎಂ. ಎಸ್. ಪಟ್ಟಣ್ಕ)

ದ್ದಾರೆ. ದೇಶದ ಆಡಳಿತವನ್ನು ನಡೆಸುವುದರ ಕಡೆ ಸ್ವಲ್ಪವಾದರೂ ಲಕ್ಷ್ಯ ಅವರಿಗಿಲ್ಲವೆಂದು ಹೇಳುತ್ತೇನೆ. ಮಂತ್ರಿಮಂಡಲದವರು ಪ್ರತಿ ಸಾರಿಯೂ ಟೂರ್ ಬರಬೇಕಾದರೆ, ಕಾಂಗ್ರೆಸ್ ಪಕ್ಷದವರು, ಪೋಲೀಸು ಅಧಿಕಾರಿಗಳು ಮತ್ತು ಕೆಳಧಿಕಾರಿಗಳೊಂದಿಗೆ ಒಳಸಂಚು ನಡೆಸಿ, ಅವರಿಗೆ ಒಳಗೊಳಗೆ ಇನ್‌ಸ್ಟ್ರಕ್ಷನ್ ಕೊಟ್ಟು ಬರುವ ಹಾಗೆ ಕಾಣುತ್ತಿದೆ. ಏಕೆಂದರೆ, ಅವರು ಟೂರು ಬಂದಾಕ್ಷಣದಿಂದ ಪೋಲೀಸರ ದೌರ್ಜನ್ಯಗಳನ್ನು ಮತ್ತು ಪೋಲೀಸು ಆಡಳಿತವನ್ನು ನೋಡಿದರೆ, ವಿರೋಧಪಕ್ಷದವರಾಗಲಿ, ಸಾಮಾನ್ಯ ಜನರಾಗಲಿ ಜೀವನ ಸಾಗಿಸುವುದೇ ಬಹಳ ಕಷ್ಟ. ಈ ಬಗ್ಗೆ ಎಷ್ಟೋ ಉದಾಹರಣೆಗಳೊಂದಿಗೆ ಈ ಅಸೆಂಬ್ಲಿಯಲ್ಲಿ ಪ್ರಸ್ತಾಪ ಮಾಡಿದ್ದರು. ಕೇಸುಗಳು ಸಬ್‌ಜುಡಿಸಾಗಿವೆ, ಕೋರ್ಟಿನಲ್ಲಿವೆ, ಏನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ನಿರಪರಾಧಿಗಳನ್ನು ಅಧಿಕಾರ ಮದದಿಂದ ವಶಕ್ಕೆ ತೆಗೆದುಕೊಂಡು, 1–1½ ವರ್ಷದಿಂದ ಜಾಮೀನು ಇಲ್ಲದೆ ಜೈಲಿನಲ್ಲಿ ಹತ್ತಿಟ್ಟುಕೊಂಡ ಉದಾಹರಣೆಗಳಿವೆ. ಇವರು ನಾವು ಹೇಳುವುದನ್ನು ಇಲ್ಲಿ ಅಸೆಂಬ್ಲಿಯೊಳಗೆ ಅಲ್ಲಗಳೆದು, ನಾವು ದೊಡ್ಡ ಬುದ್ಧಿವಂತರಿದ್ದೇವೆ, ವಕೀಲರಿದ್ದೇವೆ, ಪಂಡಿತರಿದ್ದೇವೆಂದು ಐದು ನಿಮಿಷದಲ್ಲಿ ಉತ್ತರ ಕೊಡುವುದರಲ್ಲಿ ಏನೂ ಅರ್ಥವಿಲ್ಲ, ಇದರ ಮೇಲೆ ಜಮಖಂಡಿ ಮತ್ತು ರಾಂದುರ್ಗ ಭಾಗಗಳೊಳಗೆ ವಿರೋಧ ಪಕ್ಷದವರ ಮೇಲೆ ಕ್ರಿಮಿನಲ್ ಆರೋಪಗಳನ್ನು ಹೊರಿಸಿ, ಅವರನ್ನು ಜೈಲಿಗೆ ಹಾಕಿದ್ದು, ವಾರೆಂಟು ತಂದಿದ್ದು, ಸರ್ವವಿಧದಲ್ಲಿಯೂ ತೊಂದರೆ ಕೊಟ್ಟಿದ್ದು. ಮುಂತಾದವುಗಳನ್ನು ವಿಚಾರಿಸಲು ಒಂದು ನಿಷ್ಪಕ್ಷಪಾತವಾದ ಕಮಿಟಿಯನ್ನು ನೇಮಿಸಬೇಕು. ಆ ಕಮಿಟಿಯೊಳಗೆ ನಾನು ಹೊರಿಸಿದ ಆರೋಪಗಳು ಸುಳ್ಳಾದರೆ ನಾನು ರಾಜೀನಾಮೆ ಕೊಟ್ಟು ಹೋಗುವುದಕ್ಕೆ ತಯಾರಿದ್ದೇನೆ. ಮುಖ್ಯಮಂತ್ರಿಗಳು ನಮ್ಮ ತಾಲ್ಲೂಕಿನೊಳಗೆ ಏನೇನು ಅತ್ಯಾಚಾರಗಳ ಆರೋಪಗಳನ್ನು ನಮ್ಮ ಕಡೆ ಜನಗಳ ಮೇಲೆ ಪೋಲೀಸಿನವರ ಸಹಾಯದಿಂದ ಹೊರಿಸಿದ್ದಾರೆ. ಅವುಗಳನ್ನು ಕೋರ್ಟಿನಿಂದ ಶುದ್ಧಪಡಿಸುವುದಕ್ಕೆ ತಯಾರಾಗಿಲ್ಲ. ಕೇಸ್ ಫೇಲ್ ಆದರೆ ರಾಜೀನಾಮೆ ಕೊಡುವುದಕ್ಕೆ ತಯಾರಿದ್ದರೆ ಛಾಲೆಂಜ್ ಕೊಡುತ್ತೇನೆ. ಇದೊಂದೇ ಅಲ್ಲ. ಇವತ್ತಿನ ದಿವಸ ಸರ್ಕಾರದವರು ಪ್ರೊಹಿಬಿಷನ್ ತೆಗೆಯಲಿ, ತೆಗೆಯದಿರಲಿ, ಇದನ್ನು ತೆಗೆಯದೆ ಸಾಧ್ಯವಿಲ್ಲ ಇದರ ಉಪಯೋಗ ತೆಗೆದುಕೊಂಡು ವಿರೋಧಪಕ್ಷದವರ ಮೇಲೆ ಇಲ್ಲದ ಸಲ್ಲದ ಆರೋಪಗಳನ್ನು ಪೋಲೀಸರು ಹೊರಿಸಿರುವುದನ್ನು ಖಂಡಿಸುತ್ತೇನೆ. ಬಟ್ಟಿ ಇಳಿಸಿ, ಬಾಟ್ಲಿಗಳನ್ನು ತಮಗಾಗದವರ ಮನೆಯ ಮನೆಗಳ ಕಿಟಿಕಿಗಳಲ್ಲಿ ಪೋಲೀಸರು ಇಡಿಸಿ, ಮಂದಿಗಳನ್ನು ಕರೆದುಕೊಂಡು ಹೋಗಿ ಗುನ್ನೇಗಾರಿಮಾಡಿ, ವಾರೆಂಟು ತೆಗೆದುಕೊಂಡು, ಅವರ ಮೇಲೆ ದಿನಬೆಳಗಾದರೆ ಹಿಂಸೆ ನಡೆಯುತ್ತಿದೆ. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಇವತ್ತಿನ ದಿವಸ ಪೋಲೀಸರು ಮಾಡುವಂಥ ದೌರ್ಜನ್ಯಗಳು ಮತ್ತು ಪೋಲೀಸರು ಮಾಡುವ ಅನ್ಯಾಯಗಳ ಬಗ್ಗೆ ಕುರಿತು ಮುಖ್ಯಮಂತ್ರಿಗಳ ಮುಂದೆ ಹೇಳಿದರೂ, ಇತರ ಕಾಂಗ್ರೆಸ್ ಮಂತ್ರಿಗಳ ಮುಂದೆ ಹೇಳಿದರೂ, ಏನೂ ಕಿವಿಗೆ ಹಾಕಿಕೊಳ್ಳುವುದಿಲ್ಲ. ಸಾಮಾನ್ಯ ಜನರಿಗೆ ಮಂತ್ರಿಗಳ ಹಾಗೆ ತಿಂಗಳಿಗೆ ಸಾವಿರ ರೂಪಾಯಿ ಭತ್ಯ ಬರುವುದಿಲ್ಲ, ಅಸೆಂಬ್ಲಿ ಮೆಂಬರುಗಳ ಹಾಗೆ ಅವರಿಗೆ 250 ರೂಪಾಯಿ ಭತ್ಯ ಇರುವುದಿಲ್ಲ. ವಿರೋಧಪಕ್ಷದ ಕಡೆಯಿಂದ, ಅನ್ಯಾಯವಾಗಿ ಪ್ರೆಷರ್‌ನಿಂದ ಕೇಸು ಹಾಕಿದ್ದಾರೆಂದು ಅಸೆಂಬ್ಲಿಯೊಳಗೆ ನಜರು ತಂದರೂ, ಸಬ್‌ಜುಡಿಸ್ ಆಗುತ್ತದೆಂದು ಹೇಳುತ್ತಾರೆ. ಬಡಜನರ ಮೇಲೆ ಹೀಗೆ ಕೇಸು ಹಾಕಿದರೆ, ಅವರ ಖರ್ಚಿಗೆ ರೊಕ್ಕ, ವಕೀಲರ ರೊಕ್ಕ ಕೊಡುವವರು ಯಾರು? ಇವತ್ತು ಜಂಖಂಡಿಯಲ್ಲಿ ದರೋಡೆ ಕೇಸುಗಳು ನೂರಾರು ಆಗಿವೆ; ಸಾವಿರಾರು ಗಟ್ಲೆ ಜನರನ್ನು ಇವುಗಳಲ್ಲಿ ಅಪಾದಿಸಿರುವುದರಿಂದ, ಅವರು ಮನೆಮಠಗಳನ್ನು ಕಳೆದುಕೊಂಡು ಹೆಂಗಸರು ಮಕ್ಕಳನ್ನು ಕಷ್ಟಕ್ಕೀಡು ಮಾಡಿದ್ದಾರೆ. ಈ ನಿರಪರಾಧಿಗಳಿಗೆ ಯಾರಾದಲೂ ಕೋರ್ಟು ಮೂಲಕ ಸಹಾಯ ಮಾಡಲು ಹೋದರೆ, ಅವರನ್ನು

ಉಳಿಸಿಕೊಳ್ಳಲು ಹೋದರೆ, ರೊಕ್ಕಕೊಡಲು ಹೋದರೆ ಅವರಿಗೆ ಒಂದಲ್ಲ ಒಂದು ತಾಪ್ರಸನ್ನು ಸರ್ಕಾರ ಕೊಡುತ್ತದೆ. ನಿರಪರಾಧಿ ಆರೋಪಿಗಳಿಗೆ ಸಹಾಯಮಾಡಬೇಕೆಂದು ಹೋದ ಕಾರ್ಯಕರ್ತರ ಮೇಲೆ ಕ್ರಿಮಿನಲ್ ಕೇಸ್ ಹಾಕಿದ್ದಾರೆ. ಅಂಥವರ ಮೇಲೆ ಅನ್ಯಾಯ ಹತ್ತಿಕ್ಕಿ ನಡೆಸಿರುತ್ತಾರೆ. ಅಂಥ ಕೇಸುಗಳನ್ನು ಇಲ್ಲಿ ಬಂದು ಹೇಳಿದರೆ ಸಬ್‌ಜುಡೀಸ್ ಆಗುತ್ತದೆಂದು ಹೇಳುತ್ತೀರ. ಒಂದು ಉದಾಹರಣೆ ಕೊಡುತ್ತೇನೆ. ಇವರ ಬಲಗೈಯ್ಯಾಗಿದ್ದಂಥ, 10–20 ವರ್ಷಗಳ ದೇಶದ ಸೇವೆಯಲ್ಲಿ ದುಡಿದಂಥ, ದೇಶದ ಸಲುವಾಗಿ ಜೀವಮಾನವನ್ನೇ ಮೀಸಲಾಗಿಟ್ಟಿದ್ದಂಥ ಬಂಧುಗಳ ಮೇಲೆ, ಇವತ್ತಿನ ದಿವಸ ಸುಳ್ಳು ಆರೋಪಗಳನ್ನು ಹೊರಿಸಿ ಜೈಲಿನಲ್ಲಿಟ್ಟಿದ್ದಾರೆಂದರೆ, ಸಬ್‌ಜುಡೀಸ್ ಆಗುತ್ತದೆಂದು ಹೇಳುತ್ತೀರ. 2–3 ವರ್ಷಗಳು ಅವರು ವೃಥಾ ಜೈಲಿನಲ್ಲಿದ್ದ ಮೇಲೆ, ಕೇಸು ನಡೆದು ಅದು ಹೋಗಿಬಿಟ್ಟರೆ, ಅವರ ಗತಿ ಏನಾಗುತ್ತದೆ ? ಮುಖ್ಯ ಮಂತ್ರಿಗಳಿಗೆ ನನ್ನ ಛಾಲೆಂಜ್ ಇದೆ. ಜಮಖಂಡಿ ಸಂಸ್ಥಾನದೊಳಗೆ, ಜಂಖಂಡಿ ತಾಲ್ಲೂಕಿನೊಳಗೆ ಕ್ರಿಮಿನಲ್ ಆರೋಪಗಳೇನಿವೆಯೋ ಅವುಗಳನ್ನು ವಿಚಾರಿಸಲು ಒಂದು ಆಲ್‌–ಪಾರ್ಟಿ ಕಮಿಟಿ ನೇಮಿಸಿ ವಿಚಾರಮಾಡಿಸಲಿಕ್ಕೆ ತಯಾರಿದ್ದರೆ ಇಂಥ ಕಮಿಷನ್ ನೇಮಿಸಿ ಎಂದು ಹೇಳುತ್ತೇನೆ. ಆ ಕಮಿಟಿ ಮಾಡಿ, ಈ ಕಮಿಟಿ ಮಾಡಿ, ಅವುಗಳಿಗೆ ಅಧ್ಯಕ್ಷರನ್ನು ನೇಮಕಮಾಡಿ ಅವರುಗಳಿಗೆ ಸಾವಿರಗಟ್ಟಲೆ ದೇಶದ ರೊಕ್ಕ ಹಾಳುಮಾಡುವುದಕ್ಕೆ ತಯಾರಿದ್ದೀರಿ. ಇವತ್ತಿನ ದಿವಸ ಜನರ ಮೇಲೆ ಅನ್ಯಾಯ ನಡೆದಿದೆ, ಅನ್ಯಾಯವಾದಂಥ ಕೇಸುಗಳು ಜನರ ಮೇಲೆ ಇವೆ, ಅವುಗಳನ್ನು ಅಸೆಂಬ್ಲಿ ಮುಂದೆ ಇಡಿ. ನಾಡಿನ ಚುನಾವಣೆಗಳು ನಡೆದಾಗ ಇವರ ವಿರುದ್ಧವಾಗಿ 10–20 ಕಾರ್ಯಕರ್ತರು ನಿಂತರು. ಚುನಾವಣೆ ನಡೆಯುವ ಸಂಧರ್ಭದಲ್ಲಿ ಒಳಗೊಳಗೇ ಅವರುಗಳ ಮೇಲೆ ಸುಳ್ಳು ಆರೋಪಗಳನ್ನು ಹೊರಿಸಿ, 12–15 ಹುಡುಗರ ಮೇಲೆ ಕೇಸು ಹಾಕಿ, ಪೋಲಿಂಗ್ ನಡೆಯುವ ಕಾಲಕ್ಕೆ ಅವರನ್ನು ಜೈಲಿನೊಳಗೆ ಇಟ್ಟರು. ನಮ್ಮ ಪಕ್ಷಕ್ಕೆ ಗೆಲವು ಆಗುವುದು ಕಡಿಮೆ ಇದ್ದರೂ, ತಾವು ಗೆದ್ದು ಬಂದ ಹಿಂದುಗಡೆ ಅವರ ಮೇಲೆ ಕೇಸು ನಡೆದರೂ, ಆ ಕೇಸು ಸಾಬೀತು ಆಗಲಿಲ್ಲ. ಏಕೆ ಮರ್ಡರ್ ಕೇಸು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಆಗುತ್ತಿದೆ. ಮುಖ್ಯಮಂತ್ರಿಗಳು ಪೋಲೀಸು ಆಡಳಿತ ನಡೆಸಲು ಅಯೋಗ್ಯರು ಎಂದು ಜಬರ್ದಸ್ತಿನಿಂದ ಹೇಳಲಿಕ್ಕೆ ಬರುತ್ತದೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ಅಯೋಗ್ಯರು ಎಂದು ಉಪಯೋಗಿಸುತ್ತಿದ್ದಾರೆ. It is parliamentary?

ಶ್ರೀ ಎಂ. ಎಸ್. ಪಟ್ಟಣ.—ಯೋಗ್ಯತೆ ಇಲ್ಲವೆಂದು ಅರ್ಥವಾಗುತ್ತದೆ. unfit ಅನರ್ಹರು ಅನ್ನಿ. ಇವತ್ತು ಕೇಳುತ್ತಿದ್ದೇನೆ: ಪ್ರತ್ಯಕ್ಷವಾಗೇನೇ ಕೇಸುಗಳು ಆಗಿರುತ್ತವೆ. ಆರೋಪ ಕೋರ್ಟಿಗೆ ಹೋದ ಮೇಲೆ ಅವರು ಬಿಡುಗಡೆಯಾಗಿ ಏಕೆ ಹಿಂದಕ್ಕೆ ಬರುತ್ತಾರೆಂದು ಕೇಳುತ್ತೇನೆ. ಅಂಥ ಪೋಲೀಸು ಅಧಿಕಾರಿಗಳಿಗೆ ಬಡ್ತಿ ಬೊಕ್ಕಸದಿಂದ ಕೊಡಿಸುತ್ತೀರ–ಕೇಸು ಉಳಿಸಿಕೊಳ್ಳುವ ಸಲುವಾಗಿ ಮಂತ್ರಿಗಳು ಮಂತ್ರಿಗಳಿಗೆ ಹೇಳಿಕೊಂಡು, ಕ್ರಿಮಿನಲ್ ಕೇಸನ್ನು ಹಾಕಲು ನೆರವಾಗುವ ಪೋಲೀಸ್ ಅಧಿಕಾರಿಗಳಿಗೆ, ಹೈಕಮ್ಯಾಂಡಿಗೆ ತಿಳಿಸಿ, ರಾಷ್ಟ್ರಾಧ್ಯಕ್ಷರಿಗೆ ತಿಳಿಸಿ ಪದವಿ ಕೊಡಿಸುತ್ತೀರ. ಹೋಗಲಿ, ಇವತ್ತಿನ ದಿವಸ ಯಾವ ರಾಜ್ಯದ ಪೋಲೀಸಧಿಕಾರಿಯೂ ನಿಷ್ಪಕ್ಷಪಾತವಾಗಿ ನಡೆಯಲಿಕ್ಕೆ ತಯಾರಿಲ್ಲ. ರಾಜ್ಯದ ಮುಖ್ಯ ಪೋಲೀಸು ಅಧಿಕಾರಿ ಭೆಟ್ಟಿಯಾಗಿ, ಯಾವುದೇ ಸುಳ್ಳು ಆರೋಪಮಾಡಿದ್ದರೂ, ಜೈಲಿನೊಳಗೆ 1–1½ ವರ್ಷ ಇದ್ದರೂ, ಕೋರ್ಟು ಅವರ ಮೇಲಿದ್ದ ಆರೋಪಗಳನ್ನು ಹರಣ ಮಾಡಿದ್ದರಿಂದ, ಅವರು ಇವತ್ತಿನ ದಿವಸ ಬಿಡುಗಡೆಯಾಗಿ ಹೊರಗೆ ಬರುತ್ತಾ ಇದ್ದಾರೆ. ಸುಮಾರು 1–1½ ವರ್ಷಗಳಿಂದಲೂ ಅಲ್ಲಿ 26 ಸಾವಿರ ಅಥವಾ 56 ಸಾವಿರ ರೂಪಾಯಿಗಳ ನಷ್ಟವನ್ನು ಹೊಂದಿರುವಂತಹ ಜನರಿಗೆ ನಿಜವಾಗಿ ಸರ್ಕಾರ ಅದನ್ನು ಕೊಡುತ್ತದೆಯೇ ? ಇದರಿಂದ ಬಡವರಿಗೆ ತ್ರಾಸು ಹೆಚ್ಚಾಗಿದೆ ಮತ್ತು ಅವರ ಪರಿಸ್ಥಿತಿ ಏನು ಎಂಬುದನ್ನು ಸರ್ಕಾರ ವಿಚಾರಮಾಡುವುದು ಇದೆ.

(ಶ್ರೀ ಎಂ. ಎಸ್. ಪಟ್ಟಣ್)

ಇನ್ನು ಪ್ರೊಹಿಬಿಷನ್ ವಿಚಾರವಾಗಿ ಹೇಳುವುದಾದರೆ ಹೋದ ಸಾರಿ ಬಡ್ಜೆಟ್ ಅಧಿವೇಶನ ದಲ್ಲಿ ಪಾನನಿರೋಧ ಶಾಖೆಯ ಮಂತ್ರಿಗಳು ನಾನು ಈ ಸಾರಿ ಒಂದು ಹೊಸ ಯೋಜನೆಯನ್ನು ಮಾಡಿ ಈ ಪಾನನಿರೋಧವನ್ನು ದೇಶಾದ್ಯಂತ ಜಾರಿಗೆ ತರುತ್ತೇನೆಂದು ಹೇಳಿದ್ದರು. ಇವತ್ತು ನಾವು ಯಾರನ್ನು ಕೇಳಬೇಕು ? ಇವತ್ತು ಒಂದು ಖಾತೆಗೆ ಇರತಕ್ಕ ಮಂತ್ರಿ ನಾಳೆ ಅಲ್ಲಿ ಇರುವು ದಿಲ್ಲ. ದಿನೇ ದಿನೇ ಬದಲಾವಣೆಗಳಾಗುತ್ತಿರುತ್ತದೆ. ಆದ್ದರಿಂದಲೇ ಈಗಿನ ಮಂತ್ರಿ ಮಂಡಲಕ್ಕೆ ದೇಶದ ಆಡಳಿತವನ್ನು ನಡೆಸುವುದಕ್ಕೆ ತಕ್ಕ ಯೋಗ್ಯತೆ ಇಲ್ಲ. ಅದಕ್ಕಾಗಿ ಕೂಡಲೇ ಇವರು ರಾಜೀನಾಮೆ ಕೊಟ್ಟು ಮನೆಗೆ ಹೋಗಬೇಕು. ಕೊನೆಯಪಕ್ಷ ದೇಶದ ಹಿತ ರಕ್ಷಣೆಗೋಸ್ಕರವಾಗಲೀ ಇವರು ರಾಜೀನಾಮೆ ಕೊಡಬೇಕು ಎಂದು ಹೇಳುತ್ತೇನೆ. ಎಲ್ಲಾ ಪಾರ್ಟಿಗಳು ಇರತಕ್ಕಂತ ಕೆಲವು ಸಂಸ್ಥಾನಗಳ ಸರ್ಕಾರದಲ್ಲಿಯೂ ಇಂತಹ ಅನ್ಯಾಯಗಳು ಕಂಡುಬಂದ ಮೇಲೆ ಆ ಸರ್ಕಾರಗಳು ರಾಜೀನಾಮೆ ಕೊಟ್ಟಿರುವ ನಿದರ್ಶನ ನಮ್ಮ ಮುಂದೆ ಇರುವಾಗ, ಮತ್ತು ಆ ಸರ್ಕಾರಗಳು ಮಾಯವಾಗಿ ಬೇರೆ ಹೊಸ ಸರ್ಕಾರ ಸ್ಥಾಪನೆಯಾಗಿರು ವಾಗ, ಮೈಸೂರಿನಲ್ಲಿಯೂ ಈ ಸರ್ಕಾರ ಹೋಗಿ ಹೊಸ ಸರ್ಕಾರ ಬಾರದೇ ಇದ್ದರೆ ಇದರಿಂದ ಯಾರಿಗೂ ಸುಖವಿಲ್ಲ. ಇಷ್ಟೇ ಅಲ್ಲ ಇವತ್ತು ಮುಂದಿನ ಮಹಾ ಚುನಾವಣೆ ಬಂದಾಗ ವಿರೋಧ ಪಕ್ಷದವರು ಸಹ ದೇಶದ ಜನತೆ ಕೇಳುವ ಪ್ರಶ್ನೆಗೆಲ್ಲಾ ಉತ್ತರ ಕೊಡಬೇಕಾಗಿದೆ. ಆದರೆ ವಿರೋಧ ಪಕ್ಷದವರು ಇಂತಹ ಅನ್ಯಾಯ ಆಡಳಿತದ ಬಗ್ಗೆ ಯಾವುದು ನ್ಯಾಯ ಎಂಬ ವಿಚಾರ ತಿಳಿಯುವಂತಹ ಪರಿಸ್ಥಿತಿಯೇ ಇಲ್ಲವಾಗಿದೆ. ವಿರೋಧ ಪಕ್ಷದ ಪರವಾಗಿ ನಾವು ಈ ಸಭೆಯಲ್ಲಿ ಚುನಾಯಿತರಾಗಿ ಬಂದಿರುವುದು. ಇವತ್ತು ನಮಗೆ ನಿಮ್ಮ ಪಕ್ಷ ಬೇಕಾಗಿಲ್ಲ. ನಿಮ್ಮ ರಾಜ್ಯಾಡಳಿತದ ಶಿಸ್ತು ಸರಿಯಾಗಿಲ್ಲ. ನಿಮ್ಮ ಕಾರ್ಯಕರ್ತರ ಸುಳ್ಳು ಆರೋಪಗಳು, ಸುಳ್ಳು ಕೇಸುಗಳು ಜಾಸ್ತಿಯಾಗಿವೆ. ಈಗಿರತಕ್ಕ ಪೋಲೀಸಿನವರಿಗೆ ಮಂತ್ರಿಗಳೇ ಇನ್‌ಸ್ಟ್ರಕ್ಷನ್ಸ್ ಕೊಡುವುದಕ್ಕೆ ಷುರುಹಚ್ಚಿದ್ದಾರೆ. ನೂರಾಲು ತಾಲ್ಲೂಕ್‌ನೊಳಗೆ ಇವರು ಭೇಟಿ ಮಾಡುವ ಉದ್ದೇಶ ಏನೆಂದರೆ ಯಾವ ಪ್ರಕಾರ ತಮಗೆ ಆಗದವರ ಮೇಲೆ ಕೇಸು ಮಾಡಬೇಕು, ಯಾವಪ್ರಕಾರ ನಾಲಾಯಕ್ಕಾದವರಿಗೆ ಅಂಜಿಕೆಯನ್ನುಂಟುಮಾಡಬೇಕು. ಯಾವ ರೀತಿ ಅವರ ಮೇಲೆ ಜಬರದಸ್ತು ಮಾಡಬೇಕು ಎಂಬೀ ಉದ್ದೇಶದಿಂದ ಹೋಗುತ್ತಾರೆ. ಇಲ್ಲದಿದ್ದರೆ ಅಂತಹ ಕಡೆಗಳಲ್ಲಿ ನಟ್ಟು ಕಡಿಯಲಿಕ್ಕೆ ಹೋಗುತ್ತಾರೆಯೇ ! ಇದೂ ಅಲ್ಲದೆ ಅಲ್ಲಿರತಕ್ಕ ಹೆಣ್ಣು ಮಕ್ಕಳನ್ನು ಮತ್ತು ಇತರ ನೂರಾರು ಮಂದಿ ಸ್ನೇಹಿತರನ್ನು ಕರೆದು ತಮ್ಮ ಪಕ್ಷದಕಡೆಗೆ ಮುಂದಿನ ಮಹಾ ಚುನಾವಣೆಯಲ್ಲಿ ಎಲ್ಲರ ಕಡೆಯಿಂದಲೂ ಓಟು ಮಾಡಿಸಬೇಕು ಎಂಬೀ ಚುನಾವಣಾ ಪ್ರಚಾರಕ್ಕಾಗಿಯೇ ಇವರು ಟೂರ್ ಮಾಡುವುದಾಗಿದೆ. ಇಂತಹ ಒಂದು ಇನ್‌ಫ್ಲುಯನ್ಸ್‌ನಿಂದ ಅವರ ಹಿತ ಮಾಡಿದರೆ ನಿಮಗೇನು ಆಗುತ್ತದೆಂಬುದನ್ನು ಮುಂದೆ ವಿಚಾರ ಮಾಡಬೇಕು. ಮುಖ್ಯಮಂತ್ರಿಗಳೂ ಪರಿಸ್ಥಿತಿ ಏನಾಗುತ್ತದೆಂಬುದನ್ನು ಈಗಲೇ ವಿಚಾರಮಾಡಬೇಕು. ಇದೆಲ್ಲವೂ ರಾಜ್ಯಾಡಳಿತಕ್ಕೆ ಕೇಡುತನ. ನಾನು ಸುಮಾರು 20 ವರ್ಷಗಳಿಂದಲೂ ರಾಜಕೀಯ ಕಾರ್ಯಕರ್ತನಾಗಿ ಕೆಲಸ ಮಾಡಿದ್ದೇನೆ. ಇನ್ನೂ ಅನೇಕ ವರ್ಷಗಳತನಕ ಅಸೆಂಬ್ಲಿ ಕಾರ್ಯಕರ್ತನಾಗಿ ದುಡಿಯುವುದಕ್ಕೆ ತಯಾರಾಗಿದ್ದೇನೆ. ಮುಖ್ಯ ಮಂತ್ರಿಗಳು ಜಮಖಂಡಿಗೆ ಕಾರ್ಯಕರ್ತರಾಗಿ ಸೇವೆ ಮಾಡಿರಬಹುದು. ನಾನು ಸಹ ರಾಮ ದುರ್ಗಕ್ಕೆ ಕಾರ್ಯಕರ್ತನಾಗಿ ಸೇವೆ ಮಾಡಿದ್ದೇನೆ. ಹಿಂದೆ ಅನೇಕ ಮುಖ್ಯಮಂತ್ರಿಗಳೆಲ್ಲರೂ ಸೇರಿ ರಾಜ್ಯಕರ್ತರನ್ನು ಯಾರನ್ನು ಮಾಡಬೇಕೆಂಬ ಬಗ್ಗೆ ಒಂದು ಸಂಘ ಸಂಸ್ಥೆಯನ್ನು ರಚನೆ ಮಾಡಬೇಕೆಂಬ ವಿಷಯ ಚರ್ಚೆಯಾದಾಗ ನಮ್ಮ ಮುಖ್ಯಮಂತ್ರಿಗಳು ಮತ್ತು ಇನ್ನೂ ಅನೇಕ ಮುಖ್ಯಮಂತ್ರಿಗಳು ಸಂಘ ಸಂಸ್ಥೆರಚನೆಗೆ ಅಂಗೀಕಾರ ಕೊಟ್ಟರು. ಇದರಿಂದ ಎಷ್ಟೋ ಕಾರ್ಯ ಕರ್ತರಿಗೆ ಜೀವನಾಂಶ ದೊರೆಯಿತು.

Sri B. D. JATTI.—Sir, one clarification. The point I wanted to clarify was, there was a movement in Deccan States that there should be a Union of the Deccan States. Most of the Chief Ministers at that time who were working in the Deccan States and most of the Rulers were for having a Union. I was the first Chief Minister to oppose it. What the Member says is not correct. I was then the Chief Minister of Jamkhandi.

Sri C. M. ARUMUGHAM.—Were you the Dewan or the Chief Minister ?

Sri B. D. JATTI.—I was elected on behalf of the Congress of Jamakhandi State. I was the appointed as a popular Chief Minister and not as a Dewan.

Sri C. M. ARUMUGHAM.—Why did you oppose it, Sir ?

Sri B. D. JATTI.—I will tell you. They wanted to have one Union of Rajas and Maharajas and one of the senior Raja should be the Raj Pramukh ; we did not agree. Secondly, there was a difference about the language to be used. We wanted Kannada and they did not agree. Therefore, we did not come to any agreement.

ಅಧ್ಯಕ್ಷರು.—ಸಂಘ ರಾಜ್ಯಸ್ಥಾಪನೆ ಮಾಡುವ ಕಾಲಕ್ಕೆ ಎಲ್ಲರೂ ಸಂಘ ರಾಜ್ಯವಾಗಲಿ, ಎಂದಾಗ ನಾನು ಮಾತ್ರ ಸಂಘರಾಜ್ಯವಾಗಕೂಡದು ಎಂದು ಹೇಳಿದ್ದೇನೆ; ಎಂಬುದಾಗಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು.

ಶ್ರೀ ಬಿ. ಕೆ. ನಾಗೂರ್.—ಇವರು ವಿರೋಧ ಮಾಡಿದ್ದು ರಿಕಾರ್ಡ್ ಇದೆಯೋ?

ಶ್ರೀ ಬಿ. ಡಿ. ಜತ್ತಿ.—ರಿಕಾರ್ಡ್ ಇದೆ. ಜಮಖಂಡಿ ಸ್ಟೇಟ್ ಮತ್ತು ಕೊಲ್ಲಾಪುರ ಸ್ಟೇಟ್‌ನಲ್ಲಿರತಕ್ಕ ಮುಖ್ಯಮಂತ್ರಿಗಳನ್ನು ಕರೆಸಿ ಡಾ. ಪಟ್ಟಾಭಿಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಸಂಘರಾಜ್ಯಸ್ಥಾಪನೆ ಮಾಡುವುದಕ್ಕೆ ಮುಂಚೆಯೇ ಬೊಂಬಾಯಿ ರಾಜ್ಯ ಇಲ್ಲಿಗೆ ಮರ್ಜ್ ಆಯಿತು. ಆಗ ನನ್ನನ್ನು ಪಾಪ್ಯುಲರ್ ಚೀಫ್‌ಮಿನಿಸ್ಟರ್ ಎಂದು ಹೇಳಿದ್ದು ಎಲ್ಲರಿಗೂ ಗೊತ್ತು. ಅಲ್ಲದೆ ಹಿಂದೆ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ ಮೀಟಿಂಗ್ ನಡೆದಾಗ ಎಲ್ಲರೂ ಕೂಡಿದ್ದರು. ಆಗಲೂ ಪ್ರಾತಃಕಾಲ ಮತ್ತು ಸಾಯಂಕಾಲ ಈ ಬಗ್ಗೆ ಸಾಕಷ್ಟು ಚರ್ಚೆಯಾಗಿ ಅವೆಲ್ಲವೂ ರಿಕಾರ್ಡ್ ಮಾಡಿ ಕೊನೆಗೆ ಬ್ರೇಕ್ ಆಗಿದೆ.

ಶ್ರೀ ಎಂ. ಎಸ್. ಪಟ್ಟಣ್.—ಸಂಘರಾಜ್ಯಸ್ಥಾಪನೆ ಮಾಡಬೇಕೆಂಬ ಉದ್ದೇಶ ಆಗ ಇದ್ದರೂ ಕೂಡ 9 ಸಂಸ್ಥಾನದ ಮಹಾರಾಜರುಗಳು ಅದಕ್ಕೆ ವಿರೋಧ ಮಾಡಿದರು ಎಂದು ಇವರು ಹೇಳುತ್ತಿರುವಾಗ ಇವರು ರಾಜ ಮಹಾರಾಜರುಗಳ ಕಾಲದಲ್ಲಿ ಸದಸ್ಯರಾಗಿ ಈಗ ಮುಖ್ಯಮಂತ್ರಿಯಾಗಿ ಆ ರೀತಿ ಹಿಂದೆ ವಿರೋಧ ಮಾಡಿದವರಾಗಿದ್ದರೂ ಏಕೆ ಈ ಸರ್ಕಾರಕ್ಕೆ ಬಂದರು ?

ಅಧ್ಯಕ್ಷರು.—ಈಗಿನ ಮಂತ್ರಿಮಂಡಲ ವರ್ಗದವರ ಮೇಲೆ ಆಪಾದನೆಗಳಿರುವಾಗ, ಆ ವಿಷಯದ ಬಗ್ಗೆ ಏನಾದರೂ ಇದ್ದರೆ ಹೇಳಿ. ಬೇರೆ ವಿಷಯಗಳು ಬೇಡ.

ಶ್ರೀ ಎಂ. ಎಸ್. ಪಟ್ಟಣ್.—ಇನ್ನೊಂದು ವಿಷಯ. ಈ ದೇಶವನ್ನು ದೊಡ್ಡದಾಗಿ ಮಾಡಲು ದೇಶದ ಸ್ವಾತಂತ್ರಕ್ಕಾಗಿ ತ್ಯಾಗ ಮಾಡಿದಂತಹ ರಾಷ್ಟ್ರ ವೀರರನ್ನು ನಿರ್ಗತಿಕರನ್ನಾಗಿ ಮಾಡಿ ಹಿಂದಿನ ಮಹಾರಾಜ ಸರ್ಕಾರದಲ್ಲಾಗಲೀ ಅಥವಾ ಶ್ರೀಮಾನ್ ನಿಜಲಿಂಗಪ್ಪನವರ ಕಾಲದಲ್ಲಾಗಲೀ ಫಾಸಿಗೆ ಕೊಟ್ಟಾಗ, ಅವರ ಆಸ್ತಿಪಾಸ್ತಿ ಸರ್ಕಾರದ ವಶಕ್ಕೆ ಬಂತು.

(ಶ್ರೀ ಎಂ. ಎಸ್. ಪಟ್ಟರ್)

ಅವರು ಅದನ್ನು ಹರಾಜು ಮಾಡಿ, ಬಂದಂಥ ಹಣವನ್ನು ಹಿಂದಿನ ಸರ್ಕಾರ ಅವರ ಕುಟುಂಬ ವರ್ಗದವರಿಗೆ ವಾಪಸ್ಸು ಕೊಡಬೇಕಾಗಿತ್ತು. ಆದರೆ ಅದನ್ನು ಇವರೇ ಇಟ್ಟುಕೊಂಡಿದ್ದಾರೆ. ಅವರಿಗೆ ಹಿಂದಕ್ಕೆ ಕೊಡದಿದ್ದರೆ ಬಹಳ ಅನ್ಯಾಯವಾಗುತ್ತದೆ ಎಂಬ ಪರಿಸ್ಥಿತಿಯನ್ನು ನಾನು ಈಗ ತಿಳಿಸುತ್ತೇನೆ. ಈ ಮಂತ್ರಿಮಂಡಲ ಬಂದಮೇಲೆ ಫಾಸಿಗೆ ಹೋದಂತಹವರ ಆಸ್ತಿಯೆಲ್ಲಾ ಸರ್ಕಾರದ ಹಣವಿದ್ದಹಾಗೆ ಆಗಿದೆ. ದೇಶಕ್ಕಾಗಿ ದುಡಿದು ಫಾಸಿಗೆ ಹೋದಂತಹವರ ಆಸ್ತಿ ಕೇವಲ 21 ಸಾವಿರ ರೂಪಾಯಿಗಳು ಮಾತ್ರ. ಫಾಸಿಗೆ ಹೋದಂತಹ ಜನರ ಆಸ್ತಿಯನ್ನು ಬಡ ರೈತರಿಗೆ, ರೈತರ ಮಕ್ಕಳಿಗೆ ರೈತರ ಹೆಂಗಸರಿಗೆ ಇವತ್ತು ಹಂಚುತ್ತೇವೆಂದು ಈ ಸರ್ಕಾರ ಹೇಳಿದರೆ ಇದು ತುಂಬಾ ತಪ್ಪುಭಾವನೆ. ಇಂತಹ ನಿರ್ದಯಿ ಸರ್ಕಾರವನ್ನು ಇವತ್ತು ಕಿತ್ತೊಗೆಯಬೇಕು. ಪ್ರಜಾನುರಾಗವನ್ನು ಹೊಂದಿ ಕಳಕಳಿಯಿಂದ ದುಡಿಯುವ ಸರ್ಕಾರವನ್ನು ಇವತ್ತು ನಿರ್ಮಾಣ ಮಾಡಬೇಕೆಂದು ಹೇಳುತ್ತೇನೆ. 1942 ನೇ ಇಸವಿಯೊಳಗೆ ಇಡೀ ದೇಶದಲ್ಲಿ ಅನೇಕರನ್ನು ಕ್ರಿಮಿನಲ್ ಎಂದು ಅವನ ಮೇಲೆ ಕೇಸುಮಾಡಿದ ವಿಷಯ ಸಭಾಧ್ಯಕ್ಷರಿಗೂ ಗೊತ್ತಿದೆ, ನಾವೆಲ್ಲರೂ ಕಣ್ಣಾರೆ ನೋಡಿದ್ದೇವೆ. ಅವರ ಜೊತೆಯಲ್ಲೆಲ್ಲಾ ಓಡಾಡಿದ್ದೇವೆ. ರಾಮದುರ್ಗದಲ್ಲಿ ಇವತ್ತಿನ ದಿವಸ ಫಾಸಿಗೆ ಹೋದಂತಹವರ ಆಸ್ತಿಪಾಸ್ತಿ-ಹಣ ಸುಮಾರು 21 ಸಾವಿರ ರೂಪಾಯಿಗಳು. ಆ ಮೊಬಲಗನ್ನು ಅವರವರ ಕುಟುಂಬವರ್ಗದವರಿಗೆ ಕೊಡಲು ಈ ಸರ್ಕಾರಕ್ಕೆ ಶಕ್ತಿಯಿಲ್ಲ. ಆದ್ದರಿಂದ ಈ ಸರ್ಕಾರ ಇರಲು ಯೋಗ್ಯವಲ್ಲವೆಂದು ನಾನು ಹೇಳುತ್ತೇನೆ.

2-00 P.M.

ಇವರು ದೇಶದ ಅಭಿವೃದ್ಧಿ ಯೋಜನೆಗಳೇನಿವೆ ಅವುಗಳ ಬಗ್ಗೆ ಪೂರಾ ಅನ್ಯಾಯ ಮಾಡಿದ್ದಾರೆಂಬುದನ್ನು ನಾನು ರುಜುವಾತು ಮಾಡಿಕೊಡಲು ಸಿದ್ಧನಾಗಿದ್ದೇನೆ. ಮೇಲಾಗಿ ನಮ್ಮ ರಾಮದುರ್ಗ ತಾಲ್ಲೂಕಿಗೆ ಪ್ರತಿಯೊಬ್ಬ ಮಂತ್ರಿಗಳೂ ಬಂದು ಸ್ವತಃ ನೋಡಿಕೊಂಡು ಹೋಗಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಅಭಿವೃದ್ಧಿ ಯೋಜನೆಯೇ ಆಗಲೀ ಅಥವಾ ಹೆಣ್ಣು ಮಕ್ಕಳ ಕೇಂದ್ರದ ವಿಚಾರದಲ್ಲೇ ಆಗಲೀ ಅಥವಾ ಮತ್ತೆ ಯಾವ ಅಭಿವೃದ್ಧಿ ಯೋಜನೆಯ ವಿಚಾರದಲ್ಲೇ ಆಗಲೀ ಈಗಿರತಕ್ಕ ಮುಖ್ಯಮಂತ್ರಿಗಳು ನಮಗೆ ನ್ಯಾಯವಾಗಿ ಏನೇನು ಹಕ್ಕುಗಳು ಸಲ್ಲಬೇಕಾಗಿತ್ತೋ ಈ ಅಭಿವೃದ್ಧಿ ಯೋಜನೆಗಳಲ್ಲಿ ಅವುಗಳನ್ನೆಲ್ಲ ಕಳೆದಿದ್ದಾರೆ. ಈ ಒಂದು ಇಷ್ಯೂ ಮೇಲೇ ನಾನೀಗ ಈ ಮಂತ್ರಿಮಂಡಳ ರಾಜೀನಾಮೆ ಕೊಡಬೇಕೆಂದು ನಾನೀಗ ಕೇಳುತ್ತಿದ್ದೇನೆ. ಹೀಗೇ ಉದಾಹರಣೆಗಳನ್ನು ಕೊಡಬೇಕೆಂದರೆ ಎಷ್ಟೋ ಇವೆ. ಆದರೆ ಅವುಗಳನ್ನೆಲ್ಲ ತಿಳಿಸಲು ನನಗೀಗ ಕಾಲಾವಕಾಶವಿಲ್ಲ. ಈಗಿರತಕ್ಕ ಮುಖ್ಯ ಮಂತ್ರಿಗಳು ತಮ್ಮ ಸ್ಥಾನ-ಮಾನಗಳನ್ನೂ-ದರ್ಜೆಯನ್ನೂ ತಮ್ಮ ವಿರೋಧ ಪಕ್ಷದವರು ದೇಶಾಭ್ಯುದಯದ ಬಗ್ಗೆ ನಡೆಸುತ್ತಿದ್ದ ಕೆಲಸಕಾರ್ಯಗಳಿಗೆಲ್ಲ ಅಡ್ಡಿ ತಂದೊಡ್ಡಿ ನಮ್ಮ ತಾಲ್ಲೂಕಿನ ಕೀರ್ತಿಗೇನೇ ಧಕ್ಕೆ ತಂದಿದ್ದಾರೆ. ವಿರೋಧ ಪಕ್ಷದವರನ್ನು ತುಳಿಯಲು ಮುಖ್ಯಮಂತ್ರಿಗಳು ಕ್ರಿಮಿನಲ್ ಕೇಸುಗಳಲ್ಲಿ ತಮ್ಮ ಕೈವಾಡ ಹಚ್ಚಿಕೊಂಡು ಜನರ ಮೇಲೆ ಕೇಸುಗಳನ್ನು ಹಾಕಿಸಿ-ಅವರಿಗೆ ತೊಂದರೆ ಕೊಡಲಿಕ್ಕೆ ಹತ್ತಿದ್ದಾರೆ. ಹೀಗೆಲ್ಲ ಪ್ರಯತ್ನ ಮಾಡಿ ಒಟ್ಟಿನಲ್ಲಿ ಅವರೂ ದೇಶಾಭಿವೃದ್ಧಿ ಕೆಲಸಗಳನ್ನು ನಡೆಸದೆ, ನಡೆಸುತ್ತಿರುವ ಪಕ್ಷದವರಿಗೂ ಅವಕಾಶ ನೀಡದೆ ದೇಶದ ಅಭಿವೃದ್ಧಿಗೆ ಕೊಡಲಿಪೆಟ್ಟು ಹಾಕಿದ್ದಾರೆ. ಆದರೆ ಮೊನ್ನೆತಾನೆ ಆಡಳಿತ ಪಕ್ಷಕ್ಕೆ ಸೇರಿರತಕ್ಕ ಒಬ್ಬೊಬ್ಬ ಸದಸ್ಯರು ಮಾತನಾಡುತ್ತ ಈ ಠರಾವನ್ನು ವಿರೋಧ ಪಕ್ಷದವರು ಕೇವಲ ಒಂದು ಚುನಾವಣೆ ಸ್ಟಂಟಾಗಿ ತಂದಿದ್ದರೆಂದು ಹೇಳಿದರು. ಆದರೆ ಈ ಅವಿಶ್ವಾಸದ ಠರಾವು ಈ ಬಹುಮತವಿರತಕ್ಕ ಆಡಳಿತ ಪಕ್ಷದವರಿಂದ ಪಾಸ್ ಮಾಡಿಸುತ್ತೇವೆಂತ ನಾವೇನೂ ತಂದಿಲ್ಲ. ಆ ವಿಚಾರ ನಮಗೆಲ್ಲ ಚೆನ್ನಾಗಿ ಗೊತ್ತಿದೆ.

ಆದರೆ ಈಗ ಮುಖ್ಯವಾಗಿ ನಾವು ಈ ಅವಿಶ್ವಾಸ ಠರಾವನ್ನು ಏತಕ್ಕೆ ತಂದಿದ್ದೇವೆಂದರೆ ಹಾಲ
ದೇಶದಲ್ಲಿ ಈಗ ಆಡಳಿತ ನಡೆಸುತ್ತಿರುವ ಸರ್ಕಾರ ನಡೆಸುತ್ತಿರುವ ಅನ್ಯಾಯ, ಅಪರಾಧಗಳು
ಪೀಡೆಗಳೂ, ಹಿಂಸಾಕೃತ್ಯಗಳೂ ಏನಿವೆ ಇವುಗಳೆಲ್ಲ, ಈ ಸಭೆಯಲ್ಲಿರತಕ್ಕ ಅನೇಕ ಮಾನ್ಯ ಸದಸ್ಯರು,
ಗಳಿಗೇನೋ ಪರವಾ ಇಲ್ಲ, ಪಟ್ಟಣ್‌ರವರು ಹೇಳುತ್ತಿರುವ ಆಪಾದನೆಗಳೆಲ್ಲ ಸತ್ಯವಾದವುಗ
ಳೆಂದು ಭಾವಿಸಿ ಸಹಾನುಭೂತಿ ತೋರಿಸತಕ್ಕವರಿದ್ದಾರೆ, ಆದಾಗ್ಯೂ ಈ ಅನ್ಯಾಯ ಪರಂಪರೆ
ಗಳ ವಿಚಾರಗಳೆಲ್ಲ ಪತ್ರಿಕೆಗಳ ಮೂಲಕ ದೇಶ ದೇಶಕ್ಕೂ ಹೋಗಿ, ಜನರಿಗೆಲ್ಲ ತಿಳಿಯುವಂತಾಗ
ಲೆಂಬ ಸದುದ್ದೇಶದಿಂದ ಈ ಠರಾವನ್ನು ತಂದಿದ್ದೇವೆ. ಪಟ್ಟಣ್‌ರವರು ಹೇಳಿರತಕ್ಕದೆಲ್ಲ ಸರಿ
ಎಂತ ಹೇಳತಕ್ಕ ಜನ ಬಹು ಮಂದಿ ಇದೇ ಸಭೆಯಲ್ಲಿದ್ದಾರೆ. ಆದರೆ ಆ ಲೋಕಸೇವಕ ಆಯೋಗ
ದವರು ಈ ಮಂತ್ರಿಮಂಡಳ ಮಾಡುತ್ತಿರುವ ಕೆಲಸಕಾರ್ಯಗಳೆಲ್ಲ ಅಷ್ಟು ಅಸತ್ಯ, ಅಯೋಗ್ಯ
ವಾದವುಗಳಾಗಿದ್ದರೆ ಅವರೇಕೆ ಈ ಅಧಿವೇಶನದೊಳಕ್ಕೆ ನುಗ್ಗಲಿಲ್ಲ ಎಂತ ಕೇಳಬಹುದು. ಆದರೆ
ಹಾಗೆ ಒಳಗೆ ನುಗ್ಗಿ ಬರುವಂಥ ಜನರೂ ಇದ್ದಾರೆ. ಆದರೆ ವಿರೋಧ ಪಕ್ಷದಲ್ಲೇ ಒಂದು ಒಡ
ಕನ್ನುಂಟುಮಾಡಲು ಮಂತ್ರಿಮಂಡಳ ಪ್ರಯತ್ನಿಸುತ್ತಿದೆ. ಇದಕ್ಕಾಗಿ ಮಂತ್ರಿಗಳು ದೇಶ
ದಲ್ಲೆಲ್ಲಾ ದೇಶದ ಹಿತಕ್ಕಾಗಿ ಸಂಚಾರ ಮಾಡುತ್ತಿದ್ದೇವೆಂತ ಹೇಳಿಕೊಂಡು ಚುನಾವಣೆ ಪ್ರಚಾ
ರಕ್ಕೆ ಒಂದು ಸ್ಟಂಟ್ ಮಾಡುತ್ತಿದ್ದಾರೆ. ಈ ಮಂತ್ರಿಗಳು ದೇಶದಲ್ಲಿ ಕೈಗೊಳ್ಳುವ ಪ್ರವಾಸಗಳೆಲ್ಲ
ಕೇವಲ ಅವರು ಚುನಾವಣಾ ಪ್ರಚಾರಕ್ಕೆ ವಿನಾ ದೇಶದ ಅಭಿವೃದ್ಧಿಗಾಗಿ ಏನೂ ಇಲ್ಲ. ಇಂಥ
ಸರ್ಕಾರ ತಕ್ಷಣ ರಿಜೈನ್ ಮಾಡಬೇಕು. ದೇಶದಲ್ಲಿರತಕ್ಕ ಜನರ ಹಿತ ಸಾಧಿಸುವಂಥ ಸರ್ಕಾರ
ಚುನಾವಣೆಯಾಗಬೇಕಾದ್ದು ಅತ್ಯಗತ್ಯವೆಂತ ಹೇಳಿ ನನಗೆ ಇಷ್ಟ. ನನಗೆ ಕೊಟ್ಟಿದ್ದ ಅವಧಿಗಿಂತ
4–5 ನಿಮಿಷಗಳ ಹೆಚ್ಚು ಕಾಲಾವಕಾಶ ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ನನ್ನ ವಂದನೆಗಳನ್ನ
ರ್ಪಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಮಾನ್ಯ ಸಭಾಪತಿಗಳೇ ಶ್ರೀ ವರ್ಮಾ ಬಿ. ಡಿ.
ಜತ್ತಿಯವರು 1958ನೆ ಇಸವಿ ಮೇ ತಿಂಗಳು 8ನೇ ತಾರೀಖು ಮಧ್ಯಾಹ್ನ 11-30 ಗಂಟೆಗೆ ರೆಸಿ
ಡೆನ್ಸಿ ಭವನದಲ್ಲಿ ಹಿಂದೆ ಕಾಂಗ್ರೆಸ್ ಪಕ್ಷದ ಮಂತ್ರಿಗಳಾಗಿದ್ದ ಶ್ರೀ ಎಸ್. ನಿಜಲಿಂಗಪ್ಪನವರನ್ನು
ಅಧಿಕಾರದಿಂದ ಕಿತ್ತು ಹಾಕಿದನಂತರ ಆ ದಿವಸಲಾಗಾಯ್ತು ಇಂದಿನವರೆಗೂ ನಮ್ಮ ರಾಜ್ಯದಲ್ಲಿ
ಮುಖ್ಯಮಂತ್ರಿಗಳಾಗಿರತಕ್ಕ ಶ್ರೀ ಬಿ. ಡಿ. ಜತ್ತಿಯವರ ಮಂತ್ರಿಮಂಡಳ ದೇಶದಲ್ಲಿ ಏನೇನು
ತಮ್ಮ ಆಡಳಿತದ ಬಗ್ಗೆ, ದುರಾಡಳಿತ ನಡೆಸಿದ್ದಾರೆಂಬುದನ್ನು ಈ ಸಭೆಯವರು ತಿಳಿದುಕೊಂಡ
ಮೇಲೆ ಈ ಮಹಾ ಸಭೆಯ ಅನೇಕ ಸದಸ್ಯರು ಈ ಮಂತ್ರಿಮಂಡಳದ ಆಡಳಿತದ ಬಗ್ಗೆ ಬಹಳ
ಜಿಗುಪ್ಸೆಗೊಂಡು. ಈ ಜತ್ತಿ ಮಂತ್ರಿ ಮಂಡಳ ರಾಜೀನಾಮೆ ಕೊಡದಹೊರತು ದೇಶಾಭಿ
ವೃದ್ಧಿಗೆ ಅವಕಾಶವಿಲ್ಲ–ದೇಶಕ್ಕೂ ಕ್ಷೇಮವಿಲ್ಲ ಎಂತ ಕಾಂಗ್ರೆಸ್ ಪಕ್ಷದ ಸದಸ್ಯರೇ ಒಂದು ಅಭಿ
ಪ್ರಾಯಕ್ಕೆ ಬಂದ ಮೇಲೆ ಈ ಸಭೆಯ ವಿರೋಧ ಪಕ್ಷದವರೂ ಸಹ ಈ ಮಂತ್ರಿಮಂಡಳ ಅನೇಕ
ಅತ್ಯಾಚಾರಗಳನ್ನು ನಡೆಸಿರುತ್ತೆಂಬುದು ಮನವರಿಕೆಯಾದ ಮೇಲೆ ಈ ಮಂತ್ರಿಮಂಡಳ
ಹೋಗಲೇಬೇಕು. ಈ ಸರ್ಕಾರ ದೇಶದಲ್ಲಿರತಕ್ಕ ಜನರ ವಿಶ್ವಾಸವನ್ನು ಕಳೆದುಕೊಂಡಿದೆ
ಎಂಬುದನ್ನು ಕರಾರುವಾಕ್ಕಾಗಿ ತೋರಿಸಲು ವಿರೋಧ ಪಕ್ಷದ ನಾಯಕರಾದ ಶ್ರೀ ಬಿ. ಕೆ.
ಪುಟ್ಟರಾಮಯ್ಯನವರು ಈ ಅವಿಶ್ವಾಸ ನಿರ್ಣಯದ ಠರಾವನ್ನು ಶುಕ್ರವಾರದ ದಿವಸ ಈ
ಸಭೆಯ ಮುಂದೆ ಮಂಡಿಸಿದರು. ಹಾಗೆ ಅವರು ಸಭೆಯ ಮುಂದೆ ಮಂಡಿಸಿರತಕ್ಕ ನಿರ್ಣಯ
ದಲ್ಲಿ ಈ ದಿವಸ ಆಡಳಿತ ನಡೆಸುತ್ತಿರುವ ಜತ್ತಿ ಮಂತ್ರಿಮಂಡಳವು ಅನೇಕ ದೋಷಯುಕ್ತಗಳಿಂದ
ಕೂಡಿದ್ದಾಗಿದೆ ಇದು ದೇಶದ ಆಡಳಿತ ನಡೆಸುವುದಕ್ಕೆ ಯೋಗ್ಯತೆ ಪಡೆದಿಲ್ಲವೆಂತ ಆ ಕಾಂಗ್ರೆಸ್
ಪಕ್ಷದ ಸದಸ್ಯರೇ ಮೊದಲು ಈ ಮಂತ್ರಿಮಂಡಳದ ಮೇಲೆ ಅವರ ಪಕ್ಷದಲ್ಲಿ ಅವಿಶ್ವಾಸ ನಿರ್ಣಯ
ವನ್ನು ಮಂಡಿಸಿದರು. ಆದರೆ ಅನಂತರ ಈಗ ಕಾಂಗ್ರೆಸ್ಸಿನಲ್ಲಿರುವ ಈ ವಿರೋಧ ಪಕ್ಷದವರು
ದೇಶದಲ್ಲಿರತಕ್ಕ ಜನರಿಗೆ ಈಗಿರತಕ್ಕ ಮಂತ್ರಿಮಂಡಳ ಇರಬೇಕೇ, ಬೇಡವೇ ಎಂಬುದನ್ನು ತಿಳಿ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ದಿದ್ದವರಲ್ಲಿ ಈ ಜತ್ತಿ ಮುಖಂಡತ್ವದಲ್ಲಿರತಕ್ಕ ಮಂತ್ರಿಮಂಡಳ ಕೂಡಲೇ ಹೋಗಬೇಕೆಂಬ ಅಭಿಪ್ರಾಯ ಬಂದಿದ್ದರಿಂದ ಅವರು ಬೆಂಗಳೂರಿನಿಂದ-ಡೆಲ್ಲಿಗೆ ಈ ಜತ್ತಿ ಸರ್ಕಾರವನ್ನು ತೆಗೆಯಬೇಕೆಂದು 4-5 ಯಾತ್ರೆಗಳನ್ನು ಸಹ ಮಾಡಿದರು. ಈ ಜತ್ತಿ ಸರ್ಕಾರದ ಕೀರ್ತಿಯನ್ನೆಲ್ಲ ಮಣ್ಣು ಪಾಲು ಮಾಡಲು ಕಾಂಗ್ರೆಸ್ ಪಕ್ಷದಲ್ಲಿರುವ ಆ ವಿರೋಧ ಪಕ್ಷದವರು ಈ ಸರ್ಕಾರದ ಮೇಲೆ 29 ಛಾರ್ಜುಗಳನ್ನು ಹೊರಿಸಿ, ಇನ್ನು ಅನೇಕ ಅಪರಾಧಗಳನ್ನು ಅವರ ಮೇಲೆ ಹೇರಿದ್ದಾರೆ. ಈಗ ನಾನು ಹಾಗೆ ಅವರು ಈ ಸರ್ಕಾರದ ಮೇಲೆ ಹೊರಿಸಿರತಕ್ಕ ಆಪಾದನೆಗಳನ್ನೆಲ್ಲ ಒಂದೊಂದನ್ನಾಗಿ ಓದುತ್ತೇನೆ. ಈ ಆಪಾದನೆಗಳೆಲ್ಲ ಕಾಂಗ್ರೆಸ್ ಅಧ್ಯಕ್ಷರಿಂದ ಮೊದಲುಗೊಂಡು ಅನೇಕ ಕಾಂಗ್ರೆಸ್ ಮುಖಂಡರು ಸೇರಿ ಚರ್ಚೆ ಮಾಡಿದರೆಂಬುದಾಗಿ ಮೈಸೂರು ದೇಶದ ಎಲ್ಲ ಪತ್ರಿಕೆಗಳಲ್ಲೂ ಬಂದಿರುತ್ತೆ. ಹಾಗೆ ವಿರೋಧ ಪಕ್ಷದವರು ಮಾಡಿರತಕ್ಕ ಆಪಾದನೆಗಳ ಬಗ್ಗೆ ಮಂತ್ರಿಮಂಡಳದವರು ಕೊಟ್ಟಿರತಕ್ಕ ಹೇಳಿಕೆಗಳೂ ಸಹ ಪತ್ರಿಕೆಗಳಲ್ಲಿ ಬಂದಿರುತ್ತೆ. ಆ 29 ಛಾರ್ಜುಗಳು ಯಾವುಯಾವೆಂದರೆ ...ಓದುತ್ತೇನೆ (1) ಗುಲ್ಬರ್ಗ ಬಿ.ಇ.ಡಿ.ಟಿ, ಕಾಲೇಜಿಗೆ ಮಾಣಿಕ್ಯಂರವರ ನೇಮಕದ ವಿಚಾರ, (2) ಇಬ್ಬರು ಇದೇ ಸಭೆಯ ಎಂ.ಎಲ್.ಎ. ಗಳ ಮೇಲೆ ಹಾಕಿದ್ದ ಕೇಸುಗಳನ್ನು ಕೋರ್ಟಿನಿಂದ ವಾಪಸ್ಸು ತೆಗೆದುಕೊಂಡದ್ದು, (3) ನಿಕ್ಕಂರವರನ್ನು ಉಪ-ಕುಲಪತಿ ಸ್ಥಾನಕೆ ನೇಮಕ ಮಾಡಿದನ್ನು ತಡೆ ಹಿಡಿದ ವಿಚಾರ ಮತ್ತು (4) ಎಸ್.ವಿ.ಜಿ. ಅಯ್ಯಂಗಾರ್ ಅವರು ಹಾಕಿರತಕ್ಕ ರಿಟ್-ಅರ್ಜಿಗಳ ವಿಚಾರ. ......

Sri F. H. MOHSIN.—On a point of information. Can a Member read a newspaper in the House.

Sri B. K. PUTTARAMAIYA.—It is not a newspaper. It is an ordinary paper.

Mr. SPEAKER.—If a Member cannot read a newspaper, he cannot quote from a newspaper cutting.

Sri G. VENKATAI GOWDA.—Just to refresh his memory, he is looking into it.

Sri C. J. MUCKANNAPPA.—May I bring back to the Memory of the Chair and once when Sri Baliga was referring to a newspaper column the Chair said that if the Member is satisfied that the information contained in the paper is reliable, that it is authentic and the source of information is correct, the Member can read the paper and quote from it. I wish to take shelter under that ruling.

Mr. SPEAKER.—A Member cannot read from a newspaper. A Member cannot also read from a cutting of a newspaper. But if the Member is convinced that the matter that has appeared in a newspaper is correct, then he could make use of it. The Member should feel that to the best of his knowledge and belief the information contained in the newspaper is correct.

Sri C. J. MUCKANNAPPA.—I feel it is correct, Sir. Otherwise I would not have brought it here.

ಸಚಿವರುಗಳಲ್ಲಿ ಸಾಮರಸ್ಯದ ಅಭಾವ, ಕೆಲವು ಶಾಸನ ಸಭಾ ಸದಸ್ಯರಿಗೆ ಪ್ರೋತ್ಸಾಹ, ಕಾರ್ಯ ವಿಲಂಬ, ಮಲೆನಾಡು ಅಭಿವೃದ್ಧಿ ಮಂಡಳ ರದ್ದು ಮಾಡಿದುದು, ಸಚಿವರು ತಮ್ಮ

ಪ್ರಭಾವವನ್ನು ಉಪಯೋಗಿಸಿಕೊಂಡಿರುವುದು, ದೊಡ್ಡಣ್ಣನವರಿಗೆ ಕಂಟ್ರಾಕ್ಟ್ ಕೊಡುವುದರಲ್ಲಿ ಪ್ರಭಾವ ಬೀರಿದುದು.

ಅಧ್ಯಕ್ಷರು.—ಅದರಲ್ಲಿ ಏನಿದೆ ?

Sri C. J. MUCKANNAPPA.—These are charges made by their own friends expressing no-confidence in the Jatti Ministry. So I am making use of this piece of information and throw these people out saying that their own Party-men have no confidence in them.

Mr. SPEAKER.—He is speaking on a motion. The motion contains certain charges against the Ministry.

Sri C. J. MUCKANNAPPA.—These are all charges along with the charges made by Sri Puttaramaiya. If I read these charges, the whole thing covered by the motion will be covered. I have so much information.

ಸ್ವಾಮಿ 29 ಚಾರ್ಜುಗಳಿರುವ ಚಾರ್ಜ್ ಷೀಟ್ ಕೊಟ್ಟು ನಾಲ್ಕು ದಿನಗಳವರೆಗೆ ಶ್ರೀಮಾನ್ ಸಂಜೀವರೆಡ್ಡಿಯವರ ಸಮುಖದಲ್ಲಿ ಚರ್ಚೆ ಮಾಡಿದ್ದಾರೆ. ಅಂಗೈ ಹುಣ್ಣಿಗೆ ಕನ್ನಡಿ ಯಾಕೆ ಎಂಬಂತೆ ಈ ಎಲ್ಲಾ ಚಾರ್ಜುಗಳು ಇವೆ. ಈ ಚಾರ್ಜ್ ಷೀಟು ತೆಗೆದುಕೊಂಡು ದಿಲ್ಲಿಯ ವರೆಗೆ ಹೋಗಿ ಮಾತನಾಡಿಕೊಂಡು ತಿರುಗಿ ಬಂದರು. ಮತ್ತು ಮೈಸೂರು ಪ್ರದೇಶ ಕಾಂಗ್ರೆಸ್ ಕಮಿಟಿಯಲ್ಲಿ ನಿರ್ಣಯ ಒಂದನ್ನು ಪಾಸ್ ಮಾಡಿ ಹೇಳಿಕೆ ಕೊಟ್ಟಿದ್ದಾರೆ. ಜತ್ತಿ ಮಂತ್ರಿ ಮಂಡಳವು ತಕ್ಷಣ ರಾಜೀನಾಮೆ ಕೊಡಬೇಕು. ದೇಶಕ್ಕೆ ಬಹಳ ಅನ್ಯಾಯವಾಗುತ್ತಿದೆ ಎಂದು ನಿರ್ಣಯ ಮಾಡಿ ಹೇಳಿದ್ದಾರೆ. ಈಗ ಏನಾಗಿದೆ ಅಂದರೆ ಈ ಇಬ್ಬರು ಮುಖಂಡರು ಕೂಡಿ ಒಂದು ಕರಾರು ಮಾಡಿಕೊಂಡಿದ್ದಾರೆ. ಈ ಕರಾರು ಯಾರ ಹಿತಕ್ಕೋಸ್ಕರ, ಯಾರ ಏಳಿಗೆಗಾಗಿ, ಯಾರ ಕಲ್ಯಾಣಕ್ಕಾಗಿ, ಯಾರ ಉನ್ನತಿಗಾಗಿ ಮಾಡಿಕೊಳ್ಳಲಾಗಿದೆ? ನಿಜವಾಗಿಯೂ ಜತ್ತಿ ಮಂತ್ರಿಮಂಡಲ ರಾಜೀನಾಮೆ ಕೊಡಬೇಕಾಗಿತ್ತು. ಅವರ ಕೀರ್ತಿ ಇನ್ನು ಹೆಚ್ಚಾಗುತ್ತಿತ್ತು ಎಂದು ನನಗನ್ನಿಸುತ್ತದೆ. ದುರಾಡಳಿತ ನಡೆಸದ ಬಗ್ಗೆ ಅನ್ಯಾಯ ಪರಂಪರೆ ನಡೆದುದಕ್ಕೆ ನನ್ನ ಸ್ನೇಹಿತರಾದ ಶಿವಪ್ಪನವರು ಹಗಲು ರಾತ್ರಿ ಓಡಾಡಿದ್ದಾರೆ. ಮೈಸೂರು ಪ್ರದೇಶ ಕಾಂಗ್ರೆಸ್ ಕಮೀಟಿಯ ನಿರ್ಣಯ ನೋಡಿದರೆ ಈ ಮಂತ್ರಿ ಮಂಡಳ ಅಧಿಕಾರದಲ್ಲಿರುವದಕ್ಕೆ ಲಾಯಖ್ ಆಗಿರುವುದಿಲ್ಲ. ಅರ್ಹರಾಗಿರುವುದಿಲ್ಲ. ಶ್ರೀ ದೇವರಾಜ ಅರಸರವರು ಒಂದು ದೀರ್ಘ ಸ್ಟೇಟ್‌ಮೆಂಟ್ ಕೊಟ್ಟು ಶ್ರೀ ಜತ್ತಿಯವರಿಗೆ ಪಕ್ಷದಲ್ಲಿ ಬೆಂಬಲ ವಿಲ್ಲ ; ಅಧಿಕಾರದಲ್ಲಿರುವುದಕ್ಕೆ ಅರ್ಹರಾಗಿಲ್ಲವೆಂದು ಹೇಳಿದ್ದಾರೆ. ಹಾಗೆ ಹೇಳಿದವರನ್ನು ಶ್ರೀ ಜತ್ತಿಯವರು ಈಗ ಹೇಗೆ ಇಟ್ಟುಕೊಂಡಿದ್ದಾರೆ. ಅವರ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳಲಿ. ಜತ್ತಿಯವರಿಗೆ ಬೆಂಬಲವಿಲ್ಲವೆಂದು ಶ್ರೀ ಅರಸರವರೇ ಹೇಳಿದ್ದಾರೆ.

Sri C. M. ARMUGHAM.—If they take action against Sri Devaraj Urs, again trouble starts.

(*laughter*).

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ದೇಶಕ್ಕೆ ಅನ್ಯಾಯವಾಗಿದೆ ಎಂದು ಶ್ರೀ ದೇವರಾಜ್ ಅರಸ್ ರವರು ಹೇಳಿಕೆ ಕೊಟ್ಟಿದ್ದಕ್ಕೆ ಕಾಂಗ್ರೆಸ್ ಮಂತ್ರಿ ಮಂಡಳದ ಒಬ್ಬ ಸದಸ್ಯರಾದರೂ ಕಂಟ್ರಿಡಿಕ್ಟ್ ಮಾಡಿದ್ದಾಗಿದ್ದರೆ ಮಂತ್ರಿ ಮಂಡಳದಲ್ಲಿ ವಿಶ್ವಾಸವಿದೆ ಎಂದು ಹೇಳಬಹುದಾಗಿತ್ತು. ಬೆಂಗಳೂರಿಗೆ ಪಂಡಿತ ನೆಹರು ಅವರು ಬಂದಾಗ್ಗೆ ಪ್ರತಿಯೊಬ್ಬ ಮಂತ್ರಿಯವರನ್ನು ಕರೆದು 29 ಚಾರ್ಜಿಸ್ ಬಗ್ಗೆ ಕೇಳಿದಾಗ್ಗೆ ಎಲ್ಲಾ ವಿಷಯಗಳ ಬಗ್ಗೆ ಒಪ್ಪಿಕೊಂಡಿದ್ದಾರೆ ಎಂಬುದನ್ನು ನಿನ್ನೆ ದಿವಸ ಶ್ರೀ ಮೊಹಸೀನರವರು ಶ್ರೀ ಪುಟ್ಟರಾಮಯ್ಯನವರ ಹತ್ತಿರ ತಾವೇ ಹೋಗಿ ಹೇಳಿದ್ದಾರೆಂದು ಅವರು ನನಗೆ ಹೇಳಿದರು.

Sri KADIDAL MANJAPPA.—He is saying something which I cannot understand.

ಅಧ್ಯಕ್ಷರು.—ಅದು ಹೋಗಲಿ, ಬಿಡಿ.

Sri F. H. MOHSIN.—Sri Muckannappa himself has given this information to me.

(*laughter.*)

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶ್ರೀಮಾನ್ ಮೊಹಸೀನ್‌ರವರು ನನಗೆ ಹಾಗೆ ಹೇಳುವದಾದರೆ, ಈ 29 ಚಾರ್ಜಸ್‌ಗಳನ್ನು ನನಗೆ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಕೊಟ್ಟಿದ್ದಾರೆಂದು ನಾನು ಹೇಳುತ್ತೇನೆ.

Sri KADIDAL MANJAPPA.—This is a deliberate false statement and a wrong statement. ಸದಸ್ಯರು ಅಭುತ್ತ ಸುಳ್ಳು ವಿಷಯ ಹೇಳುತ್ತಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶ್ರೀಮಾನ್ ದೊಡ್ಡಣ್ಣನವರಿಗೆ ಕೊಟ್ಟಿರುವ ಅರಣ್ಯದ ಕಂಟ್ರಾಕ್ಟ್ ವಿಚಾರದಲ್ಲಿ I see some fishy about this, please pardon enquiry ಎಂದು ಪಂಡಿತ ನೆಹರು ಅವರು ಹೇಳಿದರು. ಇದನ್ನು ಬರವಣಿಗೆಯಲ್ಲಿ ಬೇಕಾದರೆ ಕೊಡುತ್ತೇನೆ ನಾನು ಹೇಳುವುದರಲ್ಲಿ ತಪ್ಪಿದ್ದರೆ ನನ್ನ ಮೇಲೆ ಯಾವ ಶಿಸ್ತಿನ ಕ್ರಮವನ್ನಾದರೂ ತೆಗೆದುಕೊಳ್ಳಬಹುದೆಂದು ಈ ಸಭೆಯಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಮಂತ್ರಿ ಮಂಡಲದ ಮೇಲೆ ಹೊರಿಸಿದಂಥ 29 ಅಪಾದನೆಗಳಲ್ಲಿ ಒಂದಾದರೂ ಸಾಬೀತಾದಾಗ, ಅದರ ಬಗ್ಗೆ ವಿಚಾರಣೆಯಾಗಬೇಕೆಂದು ಯಾರ ಹೆಸರಿನಲ್ಲ, ಯಾರ ನೆರಳಿನಲ್ಲಿ, ಯಾರ ಆಶ್ರಯದಲ್ಲಿ, ಯಾರ ಆಶೀರ್ವಾದ ಬಲದಿಂದ ಇವರು ಇವೊತ್ತು ಅಧಿಕಾರದಲ್ಲಿದ್ದಾರೆಯೋ ಅವರೇ ಹೇಳಿದಾಗ ಜತ್ತಿ ಮಂತ್ರಿಮಂಡಲ ರಾಜಿನಾಮೆ ಕೊಡಬೇಕೇ ಇಲ್ಲವೇ! ಜನತೆಗೆ ಇವರಲ್ಲಿ ವಿಶ್ವಾಸವಿದೆಯೋ ಎಂದು ಕೇಳುತ್ತೇನೆ. ಇಷ್ಟೇ ಅಲ್ಲದೆ ವಿಚಾರಣೆ ಮಾಡಬೇಕೆಂದು ಹೇಳಿದುದನ್ನು ಹಾಗೆಯೇ ಬಿಟ್ಟು, ನಾಲ್ಕು ಜನ ಮಂತ್ರಿಗಳನ್ನು ತೆಗೆದುಕೊಂಡು ಮಂತ್ರಿಮಂಡಲದ ವಿಸ್ತರಣೆ ಮಾಡತಕ್ಕ ಮಹತ್ಕಾರ್ಯಕ್ಕೆ ಕೈ ಹಾಕಿದರಲ್ಲ. ಇವರು ಜನತೆಯ ವಿಶ್ವಾಸವನ್ನು ಸಂಪಾದನೆ ಮಾಡಿಕೊಂಡಿದ್ದಾರೆಯೇ, ಜನತೆಗೆ ಇವರಲ್ಲಿ ವಿಶ್ವಾಸವಿದೆಯೋ ಎಂದು ಕೇಳುತ್ತೇನೆ. ಯಾರೋ ಹೇಳಿದುದಲ್ಲ, ನಾವು ಹೇಳಿದುದಲ್ಲ ಆಡಳಿತದಲ್ಲಿರುವ ಪಕ್ಷಕ್ಕೆ ಸೇರಿದವರು ಹೇಳಿದುದರಲ್ಲಿಯೇ ಇವರಿಗೆ ನಂಬಿಕೆಯಿಲ್ಲ. ಯಾವ ಮುಖ ಹೊತ್ತುಕೊಂಡು ಅಧಿಕಾರ ಬೇಕು ಎಂದು ಅಧಿಕಾರ ಸ್ಥಾನದಲ್ಲಿ ಕುಳಿತುಕೊಂಡಿದ್ದೀರಿ ಎಂದು ಕೇಳುತ್ತೇನೆ. ಜನತೆಗೆ ನಿಮ್ಮಲ್ಲಿ ನಂಬಿಕೆಯಿದೆಯೇ, ವಿಶ್ವಾಸವಿದೆಯೇ ಎಂದು ಕೇಳುತ್ತೇನೆ. ಆ ಸ್ಥಾನ ಬೇಕು, ಈ ಸ್ಥಾನ ಬೇಕು, ನನ್ನನ್ನು ಹಿಂದಕ್ಕೆ ತಳ್ಳಿದರು, ನನ್ನಿಂದ ನಾಯಕನ ಸ್ಥಾನ ಕಿತ್ತುಕೊಂಡರು ಎಂದು ನಾಲ್ಕು ದಿನ ಪಂಚಾಯಿತಿಯಾಯಿತು, ನನಗೆ ಅರಣ್ಯ ಖಾತೆ ಬೇಡ, ನನಗೆ ಒಳಾಡಳಿತ ಶಾಖೆ ಬೇಕು, ನಾನು ಲೋಕೋಪಯೋಗಿ ಶಾಖೆಯನ್ನು ಬಿಟ್ಟು ಕೊಡುವುದಿಲ್ಲ, Law and Labour ಬಿಟ್ಟು ಕೊಡುವುದಿಲ್ಲ, ಎರಡನೇ ಸ್ಥಾನ, ಮೂರನೇ ಸ್ಥಾನ ಬಿಟ್ಟು ಕೊಡುವುದಿಲ್ಲ ಎಂದು ವಾದ ಮಾಡಿದಿರಿ ಜಾಗಕ್ಕೋಸ್ಕರ ಕಿತ್ತಾಡಿದಿರಿ. ಈ ಮಂತ್ರಿಮಂಡಲದಲ್ಲಿ ಬಹುಮತದ ಪಕ್ಷದವರಿಗೇ ವಿಶ್ವಾಸವಿದೆಯೇ ಎಂದು ನಾನು ಕೇಳುತ್ತೇನೆ. ಮುಂದೆ ನಡೆಯುವ ಚುನಾವಣೆಗಳಲ್ಲಿ ಎಲ್ಲಿ ಅರ್ಧಚಂದ್ರವಾಗಿ ಜಾಗ ಸಿಕ್ಕುವುದಿಲ್ಲವೋ ಎನ್ನುವ ಭಯದಿಂದ ಬಾಯಿಗೆ ಬೀಗ ಹಾಕಿಕೊಂಡಿದ್ದಾರೆ. Secret ballot ನಡೆಸಿ, ಮಧ್ಯಾಹ್ನ ಮೂರೂವರೆ ಗಂಟೆಯೊಳಗಾಗಿ ಜತ್ತಿ ಮಂತ್ರಿಮಂಡಳ ನಿರ್ನಾಮವಾಗದೆ ಹೋದರೆ ನಾನು ಈ ಸಭೆಯಲ್ಲಿರುವುದಿಲ್ಲ. ಶ್ರೀಮಾನ್ ಕಡಿದಾಳ್ ಮಂಜಪ್ಪನವರು, ಶ್ರೀಮಾನ್ ಟಿ. ಸುಬ್ರಹ್ಮಣ್ಯ ಅವರು, ಶ್ರೀಮಾನ್ ರುದ್ರಪ್ಪನವರು, ಶ್ರೀಮಾನ್ ಟಿ. ಮರಿಯಪ್ಪನವರು ಎಲ್ಲರೂ ಜತ್ತಿ ಮಂತ್ರಿಮಂಡಳ ಬೇಡ ಎಂದು ಒಟ್ಟಿಗೆ ಓಟು ಹಾಕುತ್ತಾರೆ.

(ದೀರ್ಘ ನಗು.)

ಅಧ್ಯಕ್ಷರು.—ಜ್ಯೋತಿಷ್ಯ ಹೇಳಲಿಕ್ಕೆ ಪ್ರಾರಂಭ ಮಾಡಿದ್ದೀರಾ ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಜ್ಯೋತಿಷ್ಯ ಹೇಳುತ್ತಿಲ್ಲ, ಶ್ರೀ ಕಡಿದಾಳ್ ಮಂಜಪ್ಪನವರಿಂದ ಮೇಲ್ಮನೆಯ ನಾಯಕತ್ವವನ್ನು ಕಿತ್ತುಕೊಂಡು ಶ್ರೀಮಾನ್ ವೀರಣ್ಣಗೌಡರಿಗೆ ಕೊಟ್ಟರು. ಶ್ರೀಮಾನ್ ಸುಬ್ರಹ್ಮಣ್ಯ ಅವರಿಗೆ ಮೂರನೆಯ ಸ್ಥಾನವಿತ್ತದ್ದು ಅವರು ಹಿಂದೆ ಹೋಗ ಬೇಕಾಗಿ ಬಂತು. ಶ್ರೀಮಾನ್ ಚನ್ನಬಸಪ್ಪನವರು ಅಗ್ನಿಕುಂಡದಲ್ಲಿ ಬೇಯುತ್ತಿದ್ದಾರೆ. ಮಂತ್ರಿಮಂಡಳ ದಲ್ಲಿರುವ ಮಂತ್ರಿಗಳಿಗೇ ವಿಶ್ವಾಸವಿಲ್ಲದೇಯಿರುವಾಗ, ಮಂತ್ರಿಮಂಡಳ ಹೇಗೆ ಮುಂದು ವರಿಯುತ್ತದೆನ್ನುವುದು ನನಗೆ ಅರ್ಥವಾಗುವುದಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರು ಅವಿಶ್ವಾಸ ಸೂಚನೆಯ ಮೇಲೆ ಮಾತನಾಡುತ್ತಿ ದ್ದಾರೆಯೋ ಹೇಗೆ ?

Sri C. J. MUCKANNAPPA.—It is one of the ways to divide them and to see that they come over to this side and both down this Ministry.

ನನ್ನ ಸ್ನೇಹಿತರು ನಿನ್ನೆ ಒಂದು reference ಮಾಡಿದರು. ಆಂಧ್ರ ಮಂತ್ರಿಮಂಡಲದಲ್ಲಿ ಶ್ರೀಮಾನ್ ಪಟ್ಟಾಭಿರಾಮರಾಯರು ಹೈಕೋರ್ಟಿನವರು ಕೊಟ್ಟ ಜಡ್ಜ್‌ಮೆಂಟಿಗೆ ತಲೆಬಾಗಿ ಮುಖ್ಯ ಮಂತ್ರಿಗಳಿಗೆ ರಾಜಿನಾಮೆಯನ್ನು ಸಲ್ಲಿಸಿದರು. ನಮ್ಮಲ್ಲಿ ವಿದ್ಯಾಮಂತ್ರಿಗಳಾದ ಶ್ರೀಮಾನ್ ಅಣ್ಣಾರಾಯರು ದೇಶದ ಜನ ಏನೂ ಬೇಕಾದರೂ ಹೇಳಲಿ, ನಾನು ಜಾಗ ಬಿಡುವುದಿಲ್ಲ ಎಂದು ಕುಳಿತಿದ್ದಾರೆ. ಗುಲ್ಬರ್ಗ ಬಿ.ಡಿ.ಟಿ. ಕಾಲೇಜ್‌ಗೆ ಸಂಬಂಧಪಟ್ಟ ರಿಟ್‌ಅರ್ಜಿ ವಿಚಾರದಲ್ಲಿ ಹೈಕೋರ್ಟ್ ನ್ಯಾಯಾಧೀಶರು ಹೀಗೆ ಹೇಳಿದ್ದಾರೆ.

"Facts and circumstances support the contention of Mr. Venkataranga Iyengar that the orders in question were passed *mala fide*. In view, however, of the fact that these orders are liable to be quashed on other grounds which I have mentioned, it is unnecessary for me to express my final opinion on this point".

ಅಧ್ಯಕ್ಷರು.—ತಾವು ಓದಿದ್ದು, ಹೈಕೋರ್ಟಿನವರ ಆಜ್ಞೆ arbitrary ಯಾಗಿರುವ ಹಾಗೆ ಕಾಣುತ್ತದೆ......

Sri KADIDAL MANJAPPA.—That is the contention of the writ petitioner.

Sri C. J. MUCKANNAPPA.—I am reading from the Law Journal dated 25th September 1959. It is not a matter just incorporated.

Mr. SPEAKER.—The judgement seems to be based on other issues.

Sri C. J. MUCKANNAPPA.—Please go through it. I will pass it on to you.

ಈ ಸಂಸ್ಥಾನದಲ್ಲಿ ಯಾರನ್ನು ತುಳಿಯಬೇಕು, ಯಾರನ್ನು ಹೇಗೆ ಮಾಡಬೇಕು ಎಂದು ದುರುದ್ದೇಶಪೂರಿತವಾಗಿರತಕ್ಕ ಈ ಸರ್ಕಾರ ಯಾರ ವಿಶ್ವಾಸವನ್ನು ಪಡೆದಿದೆ ಎಂದು ಕೇಳುತ್ತೇನೆ. ಸ್ವಾಮಿ, ಶ್ರೀಮಾನ್ ಅಣ್ಣಾರಾಯರಿಗೆ ಘನತೆ ಗೌರವವಿದ್ದರೆ ಅವರು ಈ ಸಂಸ್ಥಾನಕ್ಕೆ ಅಂಟಿಕೊಳ್ಳುತ್ತಿರಲಿಲ್ಲ. ಮಂತ್ರಿಗಳಾಗಿ ಅವರು ಮಾಡಿದ ತೀರ್ಮಾನದ ವಿರುದ್ಧ ಹೈಕೋರ್ಟ್ ತೀರ್ಪನ್ನು ಕೊಟ್ಟಾಗ, ಅವರು ಮುಖ್ಯ ಮಂತ್ರಿಗಳಿಗೆ ತಮ್ಮ ರಾಜಿನಾಮೆ ಯನ್ನು ಕೊಟ್ಟಿದ್ದರೆ ಅಣ್ಣಾರಾಯರಿಗೆ ನಿಜವಾಗಿಯೂ ಸಂಪೂರ್ಣ ಗೌರವವಿರುತ್ತಿತ್ತು. ಹೈಕೋರ್ಟಿನವರು ಜಡ್ಜ್‌ಮೆಂಟ್ ಕೊಟ್ಟಮೇಲೆ ಸಹ ಡೆಲ್ಲಿಯವರೆಗೂ ಪ್ರಯಾಣಮಾಡಿದರು. ಸುಪ್ರೀಂ ಕೋರ್ಟಿಗೆ ಅಪೀಲ್ ಹೋಗುವುದಕ್ಕೆ ಮೈಸೂರು ಹೈಕೋರ್ಟಿನವರು ಅನುಮತಿ ಕೊಡುವುದಕ್ಕಾಗುವುದಿಲ್ಲವೆಂದರು. ಡೆಲ್ಲಿಯಲ್ಲಿ ಬಹಳ ಅಂಗಲಾಚಿ, ಇದು ಸರ್ಕಾರದ ಅಳಿವು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಉಳಿವಿನ ಪ್ರಶ್ನೆಯಾಗಿದೆ, ಇದನ್ನು ಅಡ್ಮಿಟ್ ಮಾಡಿಕೊಳ್ಳಿ ಎಂದು ಕೇಳಿಕೊಂಡರು. ಆದರೆ, on the very face of their application, the High Court has rejected their application for leave to appeal to the Supreme Court. ಹೀಗಿರಬೇಕಾದರೆ ಇವರಲ್ಲಿ ವಿಶ್ವಾಸ ತೋರಿಸುವುದಕ್ಕೆ, ಇವರು ಅರ್ಹರೇ ಎನ್ನುವುದನ್ನು ಜನ ಮತ್ತು ಈ ಸಭೆ ತೀರ್ಮಾನ ಮಾಡಲಿ ಎಂದು ನಾವು ಈ ಸೂಚನೆಯನ್ನು ತಂದಿದ್ದೇವೆ ಎಂದು ಹೇಳದೆ ವಿಧಿಯಿಲ್ಲ.

ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲಿರುವ ನವಿಲುಸ್ವಾಮಿ ದೇವಸ್ಥಾನದ ಆಡಳಿತದಲ್ಲಿ, ಒಂದು ಓಟಿಗೋಸ್ಕರವಾಗಿ, ನನ್ನ ಸ್ನೇಹಿತರಾದ ಶ್ರೀಮಾನ್ ಎಂ. ವೈ. ಘೋರ್ಪಡೆಯವರಿಗೋಸ್ಕರ ವಾಗಿ, ಶ್ರೀಮಾನ್ ಜತ್ತಿಯವರು ಕಾನೂನಿನ ಕೊಡಲಿಯನ್ನು, ನೀತಿಯನ್ನು, ರೀತಿಯನ್ನು, ಧರ್ಮವನ್ನು ಮೂಲೆಗೆ ಒತ್ತಿ ನೇರವಾಗಿ ಕೈ ಹಾಕಿದ್ದರು. ಒಬ್ಬ ಸದಸ್ಯರಿಗೋಸ್ಕರವಾಗಿ, ಅಧಿಕಾರದಲ್ಲಿ ಮುಂದುವರಿಯುವುದಕ್ಕೆ ಓಟು ಬೇಕು ಎಂದು ಯಾದವೀಕಲಹ ನಡೆಯುತ್ತಿದೆ. ಶ್ರೀಮಾನ್ ರುದ್ರಪ್ಪನವರು, ವೀರಣ್ಣಗೌಡರು, ವೈಕುಂಠಬಾಳಿಗ ಅವರು ಜತ್ತಿಯವರ ಮಂತ್ರಿ ಮಂಡಲವನ್ನು ಕಿತ್ತೊಗೆಯಬೇಕು ಎಂದು ಚಾರ್ಜ್‌ಷೀಟ್ ಬರೆಯುತ್ತಿದ್ದವರು. ಮಂತ್ರಿ ಮಂಡಲಕ್ಕೆ ಸೇರಿ ರಕ್ಷಣೆಕೊಟ್ಟಿದ್ದು ಸರಿಯೇ ಎಂದು ಕೇಳುತ್ತೇನೆ. ಈ ಮಂತ್ರಿ ಮಂಡಲದಲ್ಲಿ ಸೇರಿ ದೇಶಕ್ಕೆ ದ್ರೋಹ ಮಾಡುವುದು ಸರಿಯೇ? ಶ್ರೀಮಾನ್ ವೈಕುಂಠಬಾಳಿಗ ಅವರೇ, ಶ್ರೀಮಾನ್ ವೀರಣ್ಣಗೌಡರೇ, ಶ್ರೀ ರುದ್ರಪ್ಪನವರೇ, ಶ್ರೀಮಾನ್ ವೀರೇಂದ್ರ ಪಾಟೀಲರೇ, ಎಂದು ನಾನು ಕೇಳುತ್ತೇನೆ. ನೀವು ನಮ್ಮ ನಂಬಿಕೆಯನ್ನು ಕಳೆದು ಕೊಂಡಿದ್ದೀರಿ, ಅದಕ್ಕೋಸ್ಕರವಾಗಿ ನಾವು ಅಪನಂಬಿಕೆಯನ್ನು ತೋರಿಸುತ್ತಿದ್ದೇವೆ. ನವಿಲಸ್ವಾಮಿ ದೇವಸ್ಥಾನದ ಕೇಸಿನಲ್ಲಿ ಹೈಕೋರ್ಟಿನವರು ಕೊಟ್ಟಿರುವ ಜಡ್ಜ್‌ಮೆಂಟನ್ನು ತಾವು ಸಂಪೂರ್ಣವಾಗಿ ಓದಿದರೆ,— ನಿಜವಾಗಿಯೂ ಶ್ರೀಮಾನ್ ವೈಕುಂಠಬಾಳಿಗ ಅವರು ಯೋಚನೆ ಮಾಡಬೇಕು. ಈ ಮಂತ್ರಿ ಮಂಡಲವನ್ನು ಸೇರಬಾರದಾಗಿತ್ತು ಎಂದೆನಿಸುತ್ತದೆ. This unholy alliance with Jatti is not in the interests of the Country and the State and so let us resign ಎಂದು ಈಗಲಾದರೂ ಮನಸ್ಸು ಮಾಡಬೇಕು. ನನ್ನ ಸ್ನೇಹಿತರಾದ ಮಾನ್ಯ ವೈಕುಂಠಬಾಳಿಗ ಅವರು ಹೈಕೋರ್ಟಿನಲ್ಲಿ practice ಮಾಡುತ್ತಿದ್ದರು, ಈ ಕೇಸಿನಲ್ಲಿ ಜಡ್ಜ್‌ಮೆಂಟನ್ನು ಓದುವಾಗ ಎಂಥ ಬಿಸಿವಾತಾವರಣವಿತ್ತು ಎನ್ನುವುದು ಅವರಿಗೆ ಗೊತ್ತಿದೆ. ಹತ್ತುಜನ ಮಂತ್ರಿಗಳು ಮತ್ತು ಆರು ಜನ ತುಂಡುಮಂತ್ರಿಗಳೂ ಹೊರತಕ್ಕ ದೋಷಾತಿಶಯ ವಾದ ಘಟನೆಗಳನ್ನು ಹೊರಲು ನೀವು ನಾಲ್ಕುಜನರೂ ಅವರ ಜೊತೆಗೆ ಸೇರಿದ್ದು ಸರಿಯೇ ಎಂದು ಕೇಳುತ್ತೇನೆ. ಬಾಳಿಗರಂತಹವರು, ಸಾಧು ಸಂತರಾದಂತಹ ರುದ್ರಪ್ಪನವರು

2-30 P.M.

ವೀರಣ್ಣಗೌಡರಂತಹ ಯೋಧರು, ಈಗಿನ ಮಂತ್ರಿಮಂಡಲಕ್ಕೆ ಹೇಗೆ ಸೇರಿಕೊಂಡರು ಎಂದು ನಿನ್ನೆ ಮಾತನಾಡಿದ ನನ್ನ ಸ್ನೇಹಿತರಾದ ಶ್ರೀಮಾನ್ ನರಸಿಂಹನ್‌ರವರು ಹೇಳಿದರು. ನಿನ್ನೆದಿವಸ ನಮ್ಮ ಮಂತ್ರಿಮಂಡಲದಲ್ಲೇ ವಿಶ್ವಾಸವಿಲ್ಲ; ನಂಬಿಕೆ ಇಲ್ಲ; ಎಂದು ಹೇಳುತ್ತಿದ್ದವರು ಇವೊತ್ತು ಮಂತ್ರಿಗಳಾಗಿ ಬಂದು ಸೇರಿಕೊಂಡಿರುವುದರಿಂದ ಇವೊತ್ತಿನ ದಿವಸ ಮಂತ್ರಿಮಂಡಲ ಮಣ್ಣು ಪಾಲಾಗುತ್ತಿದೆ ಮತ್ತು ಈ ಮಹಾಸಭೆಯ ನಂಬಿಕೆಯನ್ನು ಕಳೆದುಕೊಂಡಿದ್ದೀರಿ ಎಂದು ಹೇಳುತ್ತಿದ್ದೇನೆ ಮತ್ತು ಈ ದೇಶದ ಜನತೆಯ ನಂಬಿಕೆಯನ್ನು ಉಳಿಸಿಕೊಂಡಿಲ್ಲ ಎಂದು ಈ ಅವಿಶ್ವಾಸದ ಠರಾವನ್ನು ಮಂಡಿಸಿ ಈ ರಾಜ್ಯದಲ್ಲಿ ಈ ಮಂತ್ರಿಮಂಡಲವಿರಬಾರದು ಎಂದು ಹೇಳದೆ ವಿಧಿಯಿಲ್ಲ ಎಂದು ಹೇಳುತ್ತೇನೆ. ಯಾವುದಾದರೂ ದೇಶದಲ್ಲಿ ಬಸವಣ್ಣನವರ ಕಾಲದಿಂದಲೂ, ಬಿಜ್ಜಳನೆಂಬುವರು ಬಸವಣ್ಣನವರ ಆಸ್ಥಾನದಲ್ಲಿದ್ದಾಗಿನಿಂದಲೂ ಆಗಲೇ ವೈಯುಕ್ತಿಕವಾಗಿ ಈ ರೀತಿಯಾದ ದ್ವೇಶಾಸೂಯೆಗಳಿದ್ದವೇ ಎಂದು ಮಾನ್ಯ ಅಧ್ಯಕ್ಷರವರಲ್ಲಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

ನನ್ನ ಸ್ನೇಹಿತರಾದ ಶ್ರೀಮಾನ್ ಚನ್ನಬಸಪ್ಪನವರಿಗೂ ಶ್ರೀ ಎಸ್. ವಿ. ಜಿ. ಅಯ್ಯಂಗಾರ್ ರವರ 9 ರಿಟ್ ಅರ್ಜಿಗಳನ್ನು ಪರಿಶೀಲನೆ ಮಾಡಿ ಮೈಸೂರು ಹೈಕೋರ್ಟಿನವರು ಈವರೆಗೆ ಸರ್ಕಾರ ಹೊರಡಿಸಿರುವ ಆಜ್ಞೆಗಳನ್ನು ವಜಾ ಮಾಡಿರುವುದು ತಿಳಿದ ವಿಷಯವಾಗಿದೆ. ಹಾಗಿದ್ದರೂ ಕೂಡ ಪುನಃ ಮೈಸೂರಿನ ಹೈಕೋರ್ಟಿನಲ್ಲಿ ಅರ್ಜಿ ಹಾಕಿದ್ದರೂ ಕೂಡ 9ನೇ ಸಾರಿಯೂ ಹೈಕೋರ್ಟಿನವರು ವಜಾ ಮಾಡಿದ್ದರೆಂದು ನಿನ್ನೆ ಪತ್ರಿಕೆಗಳಿಂದ ತಿಳಿದು ಬಂದಿದೆ. ಈ ಕೇಸನ್ನು ನಡೆಸುವುದಕ್ಕಾಗಿ ಮದರಾಸಿನಿಂದ ಲಾಯರನ್ನು ಕರೆಸಿದರು. ಮದರಾಸಿನಿಂದ ಲಾಯರನ್ನು ಕರೆಸಿ ಹಣವನ್ನು ಖರ್ಚುಮಾಡಲು ಮೊದಲು ನಮ್ಮ ಮಂತ್ರಿಗಳಾದ ಮರಿಯಪ್ಪನವರು ನಮ್ಮಲ್ಲಿರುವ ಅಡ್ವೊಕೇಟು ಜನರಲ್ಲರವರು ಬುದ್ಧಿವಂತರಾದವರಿದ್ದಾರೆ ಮತ್ತು ಇನ್ನೂ ಅನೇಕ ಬುದ್ಧಿವಂತರಾದ ಲಾಯರುಗಳಿದ್ದಾರೆ. ಇಂತಹದರಲ್ಲಿ ಮದರಾಸಿನಿಂದ ಏತಕ್ಕಾಗಿ ಲಾಯರನ್ನು ಕರೆಸಬೇಕು ಮತ್ತು ಈ ದೇಶದ ಹಣವನ್ನು ಏತಕ್ಕಾಗಿ ಖರ್ಚು ಮಾಡಬೇಕು ? ಎಂದು ಹೇಳಿದ್ದರೂ ಕೂಡ ಶ್ರೀಮಾನ್ ಚನ್ನಬಸಪ್ಪನವರು ಸರ್ಕಾರದ ಹಣವನ್ನು ಖರ್ಚು ಮಾಡಲು ಶ್ರೀಮಾನ್ ಮರಿಯಪ್ಪನವರೂ ಅವಕಾಶ ಕೊಟ್ಟದ್ದರಿಂದ ಶ್ರೀಮಾನ್ ಮರಿಯಪ್ಪನವರು ಕೂಡ ಈ ಮಂತ್ರಿಮಂಡಲದಲ್ಲಿ ಇರುವುದು ನ್ಯಾಯವಲ್ಲ ಎಂದು ನಾನು ಹೇಳುತ್ತೇನೆ.

Sri C. M. ARUMUGHAM.—Does he mean to say that since they have brought a lawyer from Madras, they have no confidence in the Advocate-General of the Mysore ?

Mr. SPEAKER.—That is a matter of opinion.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎರಡು ವರ್ಷಗಳ ಹಿಂದೆ ಹೈದರಾಬಾದು ಸರ್ಕಾರದಲ್ಲಿ ಎಕ್ಸಿಕ್ಯುಟೀವ್ ಇಂಜನೀಯರಾಗಿ, ಆ ಹೈದರಾಬಾದು ಸರ್ಕಾರದ ಕೆಲವು ಭಾಗಗಳು ಸೇರಿ ಈ ಕರ್ಣಾಟಕ ಪ್ರಾಂತವಾದಾಗ, ನಮ್ಮ ಶ್ರೀಮಾನ್ ವೀರಣ್ಣಗೌಡರು ಮರಾಮತ್ತು ಇಲಾಖೆಯ ಮಂತ್ರಿಗಳಾಗಿದ್ದಾಗ ಇವರು ಮೈಸೂರು ಸಂಸ್ಥಾನದ ಡೆಪ್ಯುಟಿ ಚೀಫ್ ಇಂಜನೀಯರಾಗಿ ಕೆಲಸ ಮಾಡುತ್ತಿದ್ದರು. ಆ ನಂತರ ಶ್ರೀಮಾನ್ ಚನ್ನಬಸಪ್ಪನವರು ಈ ಇಲಾಖೆಯ ಮಂತ್ರಿಗಳಾದ ಮೇಲೆ ಹೈದರಾಬಾದಿನ ಒಬ್ಬ ಮಂತ್ರಿಗಳ ಮಾತಿನ ಪ್ರಭಾವದಿಂದ ಸುಮಾರು ಎರಡುವರೆ ವರ್ಷಗಳಿಂದ ನಮ್ಮ ದೇಶದ ಒಂದು ಲಕ್ಷ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿದ್ದಾರೆ. ಈ ರೀತಿಯಾಗಿ ನಮ್ಮ ಜನತೆಯ ದುಡ್ಡು ದುರುಪಯೋಗವಾಗಿರುವುದರಿಂದ ನಮ್ಮ ದೇಶದ ಜನರ ನಂಬಿಕೆಯನ್ನು ಕಳೆದುಕೊಂಡಿದ್ದಾರೆ. ಇದರಿಂದಾಗಿ ನಮ್ಮ ಮಂತ್ರಿಮಂಡಲ ದಲ್ಲಿ ನನಗೆ ನಂಬಿಕೆ ಇಲ್ಲ ಮತ್ತು ಈ ಮಹಾಸಭೆಯ ವಿಶ್ವಾಸವನ್ನುಗಳಿಸಿಲ್ಲ ಎಂದು ನಾನು ಒತ್ತಿ ಹೇಳಬೇಕಾಗಿದೆ. ಇದೇ ರೀತಿಯಾಗಿ ಈ ಎಸ್. ಎ. ಜಿ. ಅಯ್ಯಂಗಾರ್‌ರವರ 9 ರಿಟ್ಟು ಅರ್ಜಿಗಳನ್ನು Flout ಮಾಡಿದ್ದಾರೆಂದು ಹೇಳುತ್ತೇನೆ. The Highest Tribunal in the Mysore State ಎಂದರೆ ಮೈಸೂರು ಹೈಕೋರ್ಟಿನ*** ಆ ದೇಶಕ್ಕೆ ಯಾವ ಮಾನ್ಯತೆ ಬರುತ್ತದೆ ಎಂದು ನಾನು ಕೇಳುತ್ತೇನೆ. ಹೈಕೋರ್ಟಿನವರು ಎಂಟು ಸಾರಿ ಆರ್ಡರನ್ನು ವಜಾಮಾಡಿದ್ದರೂ ಕೂಡ 9ನೇಯ ಸಾರಿ ಹೈಕೋರ್ಟಿನ ಮುಂದೆ ಹೋಗಲು ತಾವು ಯಾವ ನಂಬಿಕೆಯನ್ನುಳಿಸಿಕೊಂಡಿದ್ದೀರಿ ಎಂದು ನಾನು ಕೇಳಬೇಕಾಗಿದೆ. ಇದರಿಂದ ನಿಮ್ಮ ಮಂತ್ರಿಮಂಡಲದಲ್ಲಿ ನಂಬಿಕೆ ಇಲ್ಲ ಎನ್ನುವುದನ್ನು ನಾನಿಲ್ಲಿ ಒತ್ತಿಹೇಳಬೇಕಾಗಿದೆ.

* * *

ಅಧ್ಯಕ್ಷರು.—ತಾವು ಹೈಕೋರ್ಟಿನ ಆರ್ಡರಿಗನುಸಾರವಾಗಿ ನಡಿದಿಲ್ಲ ಎಂದು ಹೇಳಬಹುದು. *** ಎನ್ನುವ ಪದವನ್ನು ಉಪಯೋಗಿಸುವುದು ಸರಿಯಲ್ಲ. ಇದನ್ನು ವರದಿಯಿಂದ ತೆಗೆದುಹಾಕಲು ಆಜ್ಞೆ ಮಾಡಿದ್ದೇನೆ.

*** Expunged as deleted by the Chair.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದನ್ನು ಒಪ್ಪಿಕೊಳ್ಳುತ್ತೇನೆ. ಹೀಗೆ ಇಲ್ಲಿ ಬಂದು ವೈಯುಕ್ತಿಕವಾದ ದ್ವೇಷದಿಂದ ಮಾಡಿದ್ದಾರೆಂದು ಹೇಳುತ್ತಿದ್ದೇನೆ. ಅಲ್ಲದೆ ಹೀಗೆ ಒಬ್ಬ ಅಧಿಕಾರಿಗಳ ಮೇಲೆ ಒಂದು ಲಕ್ಷ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿದ್ದಾರೆ ಮತ್ತು ವೈಯುಕ್ತಿಕವಾದ ದ್ವೇಷಕ್ಕಾಗಿ ಎಂದು ಹೇಳದೆ ವಿಧಿಯಿಲ್ಲ.

ಇನ್ನೊಂದು ಉದಾಹರಣೆಯನ್ನು ಕೊಡುತ್ತೇನೆ. ಮೈಸೂರು ಸಂಸ್ಥಾನದ ಎಕ್ಸೈಸು ಕಮಿಷನವರ ಆಫೀಸಿನಲ್ಲಿ ಹೆಡ್‌ಕ್ವಾರ್ಟರು ಅಸಿಸ್ಟೆಂಟು ಅಧಿಕಾರಿಗಳಾಗಿದ್ದ ಶ್ರೀಮಾನ್ ಪಾಟೀಲ ಎಂಬುವರು ಒಂದು ಗಾಂಜಾ ಕೇಸಿನಲ್ಲಿ ಸಿಕ್ಕಿಕೊಂಡಾಗ, ಈ ಸಭೆಯಲ್ಲಿಯೂ ಗಾಂಜಾ ಕಳವು ಆಗಿದೆ, ದುರುಪಯೋಗವಾಗಿದೆ ಎಂದು ಪ್ರಶ್ನೆ ಬಂದಾಗ ಯಾವ ಕಾನೂನಿನ ರೀತಿಯಾಗಿ ಒಂದು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೀರಿ ಎಂದು ಕೇಳಿದುದಕ್ಕೆ ಶ್ರೀಮಾನ್ ಚೆನ್ನಬಸಪ್ಪನವರು, ರಾಚಯ್ಯನವರ ಮೇಲೆ, ಶ್ರೀಮಾನ್ ರಾಚಯ್ಯನವರು ಪೋಲಿಸಿನವರ ಮೇಲೆ ಎನ್‌ಕ್ವೈರು ಮಾಡುತ್ತಾರೆ. ಆ ನಂತರ ಆಂಟಿಕರಪ್‌ಷನ್ನಿನವರು ಎನ್‌ಕ್ವೈರಿ ಮಾಡುತ್ತಾರೆ ಎಂದು ಹೇಳಿದವರು, ಇವೊತ್ತಿನವರೆಗೂ ಗಾಂಜಾ ಪತ್ತೆಯಾಗಲಿಲ್ಲ ಮತ್ತು ಕಳುವಾದ ಗಾಂಜಾದ ಬಗ್ಗೆ ಯಾವ ಅಧಿಕಾರಿಗಳ ಮೇಲೂ ಶಿಕ್ಷೆಯಾಗಲಿಲ್ಲ ಇವರು ಮಂತ್ರಿಗಳ ಕೋಮಿನವರಾದರೂ ಎಂದು ಈ ರೀತಿ ಮಾಡಬಾರದು. ಇದರಲ್ಲಿ ಏನು ಧರ್ಮ ಮತ್ತು ನೀತಿ ಇದೆ ಎಂದು ನಾನು ಕೇಳುತ್ತೇನೆ.

ಶ್ರೀ ಕೆ. ಎಫ್. ಪಾಟೀಲ್.—ಪಾಟೀಲ್‌ರವರು ಯಾವ ಕೋಮಿನವರು ಎಂದು ಹೇಳಿದರೆ ಸರಿಯಾಗಿರುತ್ತದೆ. ತಾವು ಹೇಳುತ್ತಿರುವುದು ತಪ್ಪು ಅರ್ಥವಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನನಗೆ ಗೊತ್ತಿದೆ ಸ್ವಾಮಿ, ಇವರು ಕುರುಬರ ಜಾತಿಗೆ ಸೇರಿದವರು ಮತ್ತು ಹತ್ತು ಲಕ್ಷ ಕುರುಬರಿದ್ದರೂ ನಮ್ಮ ಸಂಸ್ಥಾನದಲ್ಲಿ ಒಬ್ಬರಿಗೆ ಮಾತ್ರ ಮಂತ್ರಿಗಳಾಗಲು ಅವಕಾಶ ಕೊಟ್ಟಿದ್ದಾರೆ. ಇದು ಯಾವ ನೀತಿ ಎನ್ನುವುದನ್ನು ನೀವೇ ಒಪ್ಪಿಕೊಳ್ಳಿ. ನಾನು ಏತಕ್ಕೋಸ್ಕರ ಹೇಳುತ್ತಿದ್ದೇನೆ ಎಂದರೆ,............

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಈ ವಿಚಾರ ಹಾಗಿರಲಿ, ಗಾಂಜಾದ ವಿಚಾರವೇನಾಯಿತು ಅದನ್ನು ತಿಳಿಸಿ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇವೊತ್ತಿನವರೆಗೂ ಸರ್ಕಾರದವರು ಇದರ ಬಗೆಗೆ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ ಮತ್ತು ಯಾರ ಮೇಲೆಯೂ ಜವಾಬ್ದಾರಿಯನ್ನು ಹೊರಿಸಲಿಲ್ಲ ಮತ್ತು ಈ ಅಧಿಕಾರಿಗಳನ್ನು ಸಕ್ಕರೆ ಕಾರ್ಖಾನೆಯ ಮ್ಯಾನೇಜರವರಾಗಿ ಮಾಡಿ ಸುಸೂತ್ರವಾಗಿ ಮಾಡಿದ್ದಾರೆ. ಇದುವರೆಗೆ ಯಾವ ವಿಧವಾದ ಎನ್‌ಕ್ವೈರಿಯನ್ನೂ ಮಾಡಲಿಲ್ಲ. ಮತ್ತು ಇದುವರೆಗೆ ಗಾಂಜಾದ ಬೆಲೆಯಷ್ಟು ಹಣವನ್ನೂ ಯಾರೂ ಜಮಾ ಮಾಡಿಲ್ಲ. ಇದನ್ನು ಹೇಳುತ್ತಾ ಯಾವ ಅಧಿಕಾರಿಯೂ ಈ ಮೈಸೂರು ಸಂಸ್ಥಾನದಲ್ಲಿ ತನ್ನ ಕೆಲಸವನ್ನು ಸರಿಯಾಗಿ ಮಾಡಲಾಗುತ್ತಿಲ್ಲ ಮತ್ತು ಈ ರೀತಿಯಾಗಿ ಸ್ವೇಚ್ಛೆಯಾಗಿ, ಜನರ ಹಿತದೃಷ್ಟಿಯನ್ನೂ ನೋಡದೇ ಮಾಡುತ್ತಿರುವ ಈ ಸರ್ಕಾರದ ಧೋರಣೆಯಲ್ಲಿ ನಮಗೆ ವಿಶ್ವಾಸವಿಲ್ಲ. ಇಂತಹ ವರು ನನಗೆ ಬೇಕಾದವರು, ಇಂತಹವರು ನಮ್ಮ ಸಂಬಂಧೀಕರು ಎಂದು Nepotism, Favourtism and Communalism ಎನ್ನುವುದರಿಂದಾಗಿ ಈ ದೇಶದ ಜನತೆಯ ವಿಶ್ವಾಸ ಮತ್ತು ನಂಬಿಕೆಯನ್ನು ಸಂಪೂರ್ಣವಾಗಿ ಕಳೆದುಕೊಂಡಿದೆ ಎಂದು ನಾನು ವಿಧಿಯಿಲ್ಲದೇ ಹೇಳಬೇಕಾಗಿದೆ. ಹತ್ತುಲಕ್ಷ ರೂಪಾಯಿಗಳಷ್ಟು ಹಣ ರಿಸರ್ವ್ ಬ್ಯಾಂಕಿಗೆ ಜಮಾ ಆಗಲಿಲ್ಲ. ಸುಳ್ಳು ಚಲನ್ನುಗಳಿಂದ ಒಂದು ರೂಪಾಯಿ, ಎರಡು ರೂಪಾಯಿ ಅಥವಾ ಎಂಟಾಣೆಗಳನ್ನು ಕಟ್ಟಲಿಲ್ಲ ಎಂದು ಆಂಟೀಕರಪ್‌ಷನ್ನು ಇಲಾಖೆಯವರು, ಅಂತಹ ಬಡಜನರನ್ನು ಹಿಡಿದು ಎನ್‌ಕ್ವೈರಿ ಮಾಡುತ್ತಾರೆ. ಹತ್ತು ಲಕ್ಷ ರೂಪಾಯಿಗಳಷ್ಟು ಹಣ, ದೇಶದ ಜನತೆಯ ಹಣ

ರಿಸರ್ವ್ ಬ್ಯಾಂಕಿಗೆ ಜವಾ ಇನ್ನೂ ಆಗಿಲ್ಲ. ಇಂತಹವರ ಕೈಯಲ್ಲಿ ಆಡಳಿತವಿದ್ದರೆ ದೇಶದ ಜನರ ರಕ್ಷಣೆಯಾಗುತ್ತದೆಯೇ ? ನಿಜವಾಗಿಯೂ ಜನರ ಹಿತರಕ್ಷಣೆ ಮಾಡುವ ಕಾರ್ಯ ಇದಲ್ಲ. ಇದರಿಂದಾಗಿ ದೇಶದ ಮಹಾ ಜನತೆಯಲ್ಲಿ ನಿಮಗೆ ವಿಶ್ವಾಸವಿಲ್ಲ ಎಂದು ಹೇಳದೆ ವಿಧಿಯಿಲ್ಲ.

ನಾನು ಒಂದು ಮಾತನ್ನು ಹೇಳುತ್ತೇನೆ : ಈಗಿನ ಪ್ರಜಾ ಪ್ರಭುತ್ವದಲ್ಲಿ ಇವರು ಮನಸ್ಸಿಗೆ ಬಂದ ಹಾಗೆ ನಡೆಯುವುದಕ್ಕಾಗುವುದಿಲ್ಲ. ಮೊನ್ನೆ ತಾನೇ ಜನವರಿ 19 ನೇ ತಾರೀಖಿನಲ್ಲಿ ಈ ಸರ್ಕಾರ ಮಾಡಿದಂತಹ ಒಂದು ಆರ್ಡರನ್ನು ಫೆಬ್ರವರಿ 1 ನೇ ತಾರಿಖು ಪುನಃ ಬದಲಾವಣೆ ಮಾಡಿರುವಂಥಾದನ್ನು ದೇಶದ ಜನತೆ ಓದಿದರೆ ಸರ್ಕಾರ ಅಂದರೆ ಈ ಮಂತ್ರಿ ಮಂಡಳ ಆಡಳಿತ ದಲ್ಲಿರಬಹುದೇ ಎಂದು ಪ್ರಶ್ನೆ ಕೇಳಬೇಕಾಗುತ್ತದೆ.

ಅಧ್ಯಕ್ಷರು.—ಅದು ಸಬ್‌ಜುಡೀಸ್.

ಶ್ರೀ ಎಚ್. ಜಿ. ನರಸಿಂಹೇಗೌಡ.—ಆ ವಿಷಯವನ್ನು ಮಾನ್ಯಸದಸ್ಯರು ಜನರಲ್ಲಾಗಿ ಹೇಳುತ್ತಿರುವುದು. ಹೆಸರಿಟ್ಟು ಏನೂ ಅವರು ಹೇಳಲಿಲ್ಲವಲ್ಲಾ !

ಅಧ್ಯಕ್ಷರು.—ಜನರಲ್ಲಾಗಿ ಹೇಳಿದರೂ ಕೆಲವು ವೇಳೆ ತಪ್ಪಾಗುತ್ತದೆ.

Sri C. J. MUCKANNAPPA.—Sir, I have not mentioned the person involed or the facts. I only quoted an order passed on 19th January and changed on the first of February.

Sri R. M. PATIL.—(Navalgund).—Sir, one word if the Member yields. So far as the facts are concerned, it may be stated ; it will not be a matter *sub-judice*.

(*laughter*)

Mr. SPEAKER.—Order order. It is before the High Court.

(Sri C. M. ARUMUGHAM *interrupted.*)

Mr. SPEAKER.—I am also a lawyer and I know it.

Sri C. M. ARUMUGHAM.—You are a Speaker rather than a Lawyer.

(*loud laughter.*)

Mr. SPEAKER.—It would be better not to refer to the matter before the High Court.

Sri R. M. PATIL.—The facts leading to the act may be stated ; it would not be *sub-judice*.

Mr. SPEAKER.—What is leading and what is not leading is very difficult to say. If the facts are before the High Court, I cannot go on sifting part of evidence and sifting the fact. After all, I am not a court. It would be very difficult for me. So, it is better not to refer to the matter.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಿನ್ನೆ ದಿವಸ ತಾವು ನನ್ನ ಹತ್ತಿರ ಒಂದು ವರ್ತಮಾನವನ್ನು ಕೇಳಿದಿರಿ. ನಾನು ತಮಗೆ ಕೊಡಬೇಕೆಂದು ತಮ್ಮಲ್ಲಿಗೆ ಬಂದಾಗ ವರ್ತಮಾನ ಪತ್ರಿಕಾ ಪ್ರತಿನಿಧಿಗಳಿಂದ ಆ ವರ್ತಮಾನದ ಬಗ್ಗೆ ಸರಾಸರಿ ಲೆಖ್ಖವನ್ನು ತೆಗೆದು ಕೊಂಡಿದ್ದೇನೆ ಎಂದು ಹೇಳಿದಿರಿ. ನಾನು ಈಗ ತಮಗೆ ಎಷ್ಟು ರಿಟ್ ಅರ್ಜಿಗಳು ಕೋರ್ಟಿಗೆ ದಾಖಲಾಗಿವೆ ಎಂಬುದನ್ನು ಅಂಕಿ ಅಂಶಗಳ ಮೂಲಕ ತಮಗೆ ಕೊಡ ಬಯಸುತ್ತೇನೆ. ಸರ್ಕಾರ ಮಾಡಿದಂತಹ ಅವಿವೇಕ ಪೂರ್ಣವಾದಂಥ ಆರ್ಡರುಗಳು ಮತ್ತು ಆದೇಶಗಳ ಬಗ್ಗೆ ಎಷ್ಟು ಜನ ಮೈಸೂರು ಸಂಸ್ಥಾನದ ಉನ್ನತ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ನ್ಯಾಯಾಲಾಯುದ ಮುಂದೆ ಹೋಗಿ ನಮಗೆ ಸರ್ಕಾರಿ ಆಜ್ಞೆಗಳಿಂದ ತುಂಬಾ ಅನ್ಯಾಯವಾಗಿದೆ, ನ್ಯಾಯವನ್ನು ದೊರಕಿಸಿ ಕೊಡಬೇಕೆಂದು ಕೇಳಿದ್ದಾರೆಂದರೆ. ನನ್ನ ಮನಸ್ಸಿಗೆ ಈ ಸರ್ಕಾರ ಸ್ಥಾನ ಬಿಟ್ಟು ಹೋಗಬೇಕೆಂದು ಒತ್ತಾಯ ಮಾಡಿದರೂ ಸಾಲದು ಎಂದು ಗೊತ್ತಾಗುತ್ತದೆ. ರಾಜ್ಯಾಂಗದತ್ತವಾದ ಹಕ್ಕನ್ನು ಇವರು ಉಪಯೋಗಿಸಿಕೊಂಡು ಜನತೆಗೆ ನ್ಯಾಯವನ್ನು ದೊರಕಿಸಿಕೊಡದೆ ಅವರಿಗೆ ಹೆಚ್ಚಿನ ಕಿರುಕುಳವನ್ನು ಕೊಡುತ್ತಿದ್ದಾರೆ. 1958ರಲ್ಲಿ 310 ಅರ್ಜಿದಾರರು ಸರ್ಕಾರ ಸರಿಯಾದ ಮತ್ತು ನಿರ್ದಿಷ್ಟವಾದ ತೀರ್ಮಾನಗಳನ್ನು ಅನೇಕ ಕೇಸುಗಳಲ್ಲಿ ಕೊಟಿಲ್ಲವೆಂದು ನ್ಯಾಯಾಲಯದ ಮುಂದೆ ಹೋಗಿದ್ದಾರೆ. ಆದ್ದರಿಂದ ಇವರಿಗೆ ನಿಜವಾಗಿ ಸರಿಯಾದ ಅರ್ಹತೆ ಇಲ್ಲ. ಸರ್ಕಾರಿ ಆಜ್ಞೆಯನ್ನು ಕಾನೂನಿಗನುಸಾರವಾಗಿ ಮತ್ತು ನ್ಯಾಯ ಬದ್ಧವಾಗಿ ಮಾಡಿಲ್ಲ. ಅದರಿಂದರೇ ಇವರ ಆಜ್ಞೆಗಳನ್ನು ಕೂಡಲೇ ವಜಾಮಾಡಬೇಕೆಂಬುದಾಗಿ ಹೈಕೋರ್ಟಿನ ಮುಂದೆ ಹೋಗಿ ಹೇಳಿದ್ದಾರೆ. ಆದರೆ ಅದರ ಪೈಕಿ 166 ರಿಟ್ ಅರ್ಜಿಗಳನ್ನು ಸರ್ಕಾರಕ್ಕೆ ವಿರೋಧವಾಗಿ ಮೈಸೂರು ಹೈ ಕೋರ್ಟಿನವರು ಅಲೊ ಮಾಡಿದ್ದಾರೆ. 113 ಕೇಸುಗಳನ್ನು ಸರ್ಕಾರದ ಪರವಾಗಿ ವಜಾ ಆಯಿತು. ಇನ್ನುಳಿದ 31 ಕೇಸುಗಳು ಇನ್ನು ಕೋರ್ಟಿನಲ್ಲಿ ಪೆಂಡಿಗ್‌ನಲ್ಲಿವೆ. 1959 ರಲ್ಲಿಯೂ 649 ಅರ್ಜಿಗಳು ಈ ರೀತಿಯಾದ ಅವಿವೇಕ ಪೂರ್ಣವಾದಂಥ ಮತ್ತು ನಿರ್ದಿಷ್ಟವಾದ ತಿರ್ಮಾನಗಳು ಸರ್ಕಾರಿ ಆದೇಶಗಳೊಡನೆ ಕೋರ್ಟಿನ ಮುಂದೆ ಹೋದವು, ಸರ್ಕಾರೀ ಆಜ್ಞೆಗೆ ವಿರೋದವಾಗಿ ಹೈಕೋರ್ಟಿನ ಮುಂದೆ ಜನರು ಹೋದರು. ಅವುಗಳ ಪೈಕಿ ಸರ್ಕಾರಕ್ಕೆ ವಿರೋಧವಾಗಿ ತೀರ್ಮಾನವಾದುವುಗಳು 154 ಅರ್ಜಿಗಳು ಸರ್ಕಾರದ ಪರವಾಗಿ ವಜಾ ಆದುವುಗಳು 150 ಅರ್ಜಿಗಳು. ಇನ್ನು ಕೋರ್ಟಿನಲ್ಲಿಯೇ ಪೆಂಡಿಂಗ್‌ನಲ್ಲಿರುವುವು 345 ಅರ್ಜಿಗಳು.

ಅಧ್ಯಕ್ಷರು.—ಸರ್ಕಾರಿ ಆಜ್ಞೆಗಳೆಲ್ಲಾ ಅವಿವೇಕವಾಗಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸರ್ಕಾರೀ ಆಜ್ಞೆಗಳು ಸರಿಯಲ್ಲವೆಂದು ಕೋರ್ಟಿಗೆ ಹೋಗಿರತಕ್ಕವರು 649 ಅರ್ಜಿದಾರರು ಎಂದು ಹೇಳಿದ್ದು.

Sri G. SIVAPPA (Chitradurga).—There is a difference between a case pending and a case being admitted.

Sri C. J. MUCKANNAPPA.—Sir my friend is a Lawyer and he does know how a writ petition is presented in a court of law.

(*laughter*).

ಇನ್ನು 1960 ರಲ್ಲಿ ಒಟ್ಟು 810 ಅರ್ಜಿಗಳು ಸರ್ಕಾರದ ಆಜ್ಞೆಗೆ ವಿರೋಧವಾಗಿ ಕೋರ್ಟಿಗೆ ಹೋಗಿವೆ ಎಂದು ಹೇಳುತ್ತೇನೆ. ಅದರಲ್ಲಿ 92 ಅರ್ಜಿಗಳು ಅಲೊ ಆಗಿದೆ. 204 ಅರ್ಜಿಗಳು ಡಿಸ್‌ಮಿಸ್ ಆಗಿವೆ. ಇನ್ನು 514 ಅರ್ಜಿಗಳು ಕೋರ್ಟಿನಲ್ಲಿ ಪೆಂಡಿಂಗ್ ಆಗಿವೆ.

ಇನ್ನು 1961 ರಲ್ಲಿ 105 ಅರ್ಜಿಗಳು ಈಗಾಗಲೇ ಸರ್ಕಾರದ ಅವಿವೇಕ ಪೂರ್ಣವಾದಂಥ ಆರ್ಡರುಗಳಿಂದ ಮೈಸೂರು ಹೈಕೋರ್ಟಿಗೆ ಅಡ್ಮಿಟ್ ಮಾಡಿದೆ.

ಅಧ್ಯಕ್ಷರು.—ಅವಿವೇಕ ಪೂರ್ಣ ಎಂಬುದು ಏನು ? ದೊಡ್ಡ ದೊಡ್ಡ ಅರ್ಥದಲ್ಲಿ ಹೇಳದೆ ಸುಲಭವಾಗಿ ಅರ್ಥವಾಗುವಂತಹ ಪದವನ್ನು ಉಪಯೋಗಿಸಿ ಹೇಳಿ.

Sri C. J. MUCKNNAPPA.—Sir, in my opinion, they are all order, against the law existing in the State. So, they are all wrong orders. ಕನ್ನಡಕ್ಕೆ ತರ್ಜುಮೆ ಮಾಡಿದರೆ ಇದು ರಾಂಗ್ ಎಂದು ಅರ್ಥವಾಗುತ್ತದೆ. ಅವಿವೇಕ ಎನ್ನುವುದಕ್ಕೆ ಫೂಲಿಷ್ ಎಂದು ತಾವು ಹೇಳುತ್ತೀರಿ. ಅದಕ್ಕೆ ನಾನು ತಿಳಿದು ಕೊಂಡಿರುವುದು ಅವಿವೇಕ ಎಂಬುದಾಗಿ.

ಅಧ್ಯಕ್ಷರು.—ಸುಮಾರು 3 ಸಾವಿರ ಚಿಲ್ಲರೆ ಅರ್ಜಿಗಳು ಕೋರ್ಟಿಗೆ ಹೋಗಿವೆ. ಅದರಲ್ಲಿ ಕೆಲವು ಸರ್ಕಾರದ ವಿರೋಧವಾಗಿ ಹೈಕೋರ್ಟ್ ಆರ್ಡರ್ ಆಯಿತು ಎಂದು ಹೇಳುತ್ತೀರಿ. ಅಂದಮೇಲೆ ಏಕೆ ಕೆಲವನ್ನು ಡಿಡಕ್ಟ್ ಮಾಡಿ ಹೇಳಿದಿರಿ ?

Sri C. J MUCKANNAPPA.—Sir, I have deducted all the cases of Panchayat elections, Local Board elections, and so many things. So, 1875 writ petitions were filed from 58 to 61 and 440 were allowed. I had quoted some figures yesterday. I have given a break-up now. My impression was that the orders passed by the Deputy Commissioner or Excise Commissioner or Divisional Commissioner or also subjected to the orders of the High Court. So many writ petitions against orders of the Revenue Tribunal are also pending. This inefficient Government has under it so many inefficient officers and this is reflecting on the administration of the State. It is the responsibility of the Government to keep efficient persons who can pass proper orders, and who know the laws.

ಅಧ್ಯಕ್ಷರು.—ಆ ಅಧಿಕಾರಿಗಳು ಈ ಗವರ್ನ್‌ಮೆಂಟ್ ಬರುವುದಕ್ಕೆ ಮುಂಚೆಯೇ ಇದ್ದರು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದ್ದರೂ ಈಗ inefficiency insubordination unintelligent ಎಂದು ಏನು ಏನೋ ಹೇಳಿಕೊಂಡು ಆಫೀಸರುಗಳನ್ನು ಸಸ್ಪೆಂಡ್ ಮಾಡುತ್ತಿದ್ದಾರೆ. ಹಾಗೆಯೇ ಒಂದು ಕಡೆಯಿಂದ ಎಲ್ಲಾ inefficient ಆಫೀಸರುಗಳನ್ನು ಏಕೆ suspend ಮಾಡಬಾರದು? ಇಲ್ಲದಿದ್ದರೆ ನಾವು, ನೀವು ಇಬ್ಬರೂ ಬಲಿಯಾಗುವ ಕಾಲ ಬಂದಿದೆ.

ಅಧ್ಯಕ್ಷರು.—ಸದಸ್ಯರು ಬಹಳ ಕಾಲವನ್ನು ತೆಗೆದು ಕೊಂಡಿದ್ದೀರಿ. He has already taken about fifty minutes.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—Plase give me 10 to 15 minutes more.

ಅಧ್ಯಕ್ಷರು.—ಅವರು ಜಾಸ್ತಿ ವೇಳೆ ತೆಗೆದುಕೊಳ್ಳುತ್ತಾ ಇದ್ದಾರೆ.

Sri C. J. MUCKANNAPPA.—If you feel there is any irrelevancy in my argument, you can cut me short. I will finish soon.

ಸ್ವಾಮಿ, ಈ ಸರ್ಕಾರ ಇನ್ನೂ ಏನೇನು ಮಾಡಿದೆಯೆಂದು ಹೇಳುತ್ತೇನೆ. ಜುಡಿಷಿಯಲ್ ಅಡ್ಮಿನಿಸ್ಟ್ರೇಷನ್ನಿನಲ್ಲಿ ಇಂಟರ್‌ಫಿಯರ್ ಮಾಡಿ ದೇಶಕ್ಕೆ ಅನ್ಯಾಯ ಮಾಡಿರತಕ್ಕಂಥಾದನ್ನು ಹೇಳುತ್ತೇನೆ. ಹತ್ತು ಜನ ಡಿಸ್ಟ್ರಿಕ್ಟ್ ಜಡ್ಜ್‌ಗಳಿಗೆ ಸಿಗಬೇಕಾದಂಥ ಪ್ರಮೋಷನ್ ಸಿಗುವುದಕ್ಕೆ ಅಡ್ಡಿ ಬಂದು, ಸರ್ಕಾರ ಅವರ ವಿಚಾರದಲ್ಲಿ ಎಷ್ಟು ವಿಂಡಿಕ್ಟೀವ್ ಆಗಿ ಎಷ್ಟು ಅಸಹ್ಯಕರವಾಗಿ ನಡೆದುಕೊಂಡಿದೆ ಎಂದು ತೋರಿಸಲು ಈ ವಿಷಯವನ್ನು ಹೇಳಬೇಕಾಗಿ ಬಂದಿದೆ. ಇವತ್ತಿನ ದಿವಸ 10 ಜನ ಸಿವಿಲ್ ಜಡ್ಜ್‌ಗಳಿಗೆ ಪ್ರಮೋಶನ್ ಸಿಗಬೇಕಾಗಿತ್ತು. ಸರ್ಕಾರ ಪ್ರಮೋಶನ್ ಸಿಗಬೇಕಾಗಿದ್ದವರನ್ನು ಅದುಮಿ, ಅವರಿಗಿಂತ ಜೂನಿಯರ್ ಆಗಿರುವ ಆಫೀಸರುಗಳಿಗೆ ಪ್ರಮೋಶನ್ ಕೊಟ್ಟಿದ್ದಾರೆ.

